ಅಕ್ಷರ ದಾಸೋಹ ಯೋಜನೆ: ಮಂಗಳೂರು ತಾಲೂಕಿನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ವ್ಯಾಪ್ತಿಯಲ್ಲಿ ಒಂದು ಅಧ್ಯಯನ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ

ಸಾದರಪಡಿಸಿದ ಸಂಪ್ರಬಂಧ

(ಅಭಿವೃದ್ಧಿ ಅಧ್ಯಯನ ವಿಭಾಗ)

ಸಂಶೋಧಕರು

ರಂಜಿತಾ

ನೋಂದಣಿ ಸಂಖ್ಯೆ : KTSMDS-00697

ಮಾರ್ಗದರ್ಶಕರು

ಡಾ. ವೈ. ರವೀಂದ್ರನಾಥ ರಾವ್

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು-575001

ಜುಲೈ 2014

1146

ಅಕ್ಷರ ದಾಸೋಹ ಯೋಜನೆ: ಮಂಗಳೂರು ತಾಲೂಕಿನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ವ್ಯಾಪ್ತಿಯಲ್ಲಿ ಒಂದು ಅಧ್ಯಯನ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ

ಸಾದರಪಡಿಸಿದ ಸಂಪ್ರಬಂಧ

(ಅಭಿವೃದ್ಧಿ ಅಧ್ಯಯನ ವಿಭಾಗ)

ಸಂಶೋಧಕರು

ರಂಜಿತಾ

ನೋಂದಣಿ ಸಂಖ್ಯೆ : **KTSMDS-00697**

ಮಾರ್ಗದರ್ಶಕರು

ಡಾ. ವೈ. ರವೀಂದ್ರನಾಥ ರಾವ್

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು–575001

ಜುಲೈ 2014

ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ **ಅಕ್ಷರ ದಾಸೋಹ ಯೋಜನೆ: ಮಂಗಳೂರು ತಾಲೂಕಿನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ವ್ಯಾಪ್ತಿಯಲ್ಲಿ ಒಂದು ಅಧ್ಯಯನ** ಎಂಬ ಶೀರ್ಷಿಕೆಯ ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ. ವೈ. ರವೀಂದ್ರನಾಥ ರಾವ್ ಅವರ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

RSuvarna

ರಂಜಿತಾ

ಸಂಶೋಧಕರು

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ,

ದಿನಾಂಕ : 12–06–2014

ಮಂಗಳೂರು.

ಯೋಗ್ಯತಾ ಪತ್ರ

ರಂಜಿತಾ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ **ಅಕ್ಷರ ದಾಸೋಹ ಯೋಜನೆ: ಮಂಗಳೂರು ತಾಲ್ಲೂಕಿನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ವ್ಯಾಪ್ತಿಯಲ್ಲಿ ಒಂದು ಅಧ್ಯಯನ** ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್. ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯುವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ಡಾ. ವೈ. ರವೀಂದ್ರನಾಥ ರಾವ್
Dr. Y. Ravindranath Rao
ಸಂಶೋಧನಾ ಮಾರ್ಗದರ್ಶಕರು
Prof & Head Dept. of Sociology
St. Mary's Syrian College
ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
576 213 (D. K.)

ದಿನಾಂಕ : 12-[illegible]-2014

ಬಲ್ಮಠ, ಮಂಗಳೂರು.

ಕೃತಜ್ಞತೆಗಳು

'ಅಕ್ಷರ ದಾಸೋಹ ಯೋಜನೆ: ಮಂಗಳೂರು ತಾಲ್ಲೂಕಿನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ವ್ಯಾಪ್ತಿಯಲ್ಲಿ ಒಂದು ಅಧ್ಯಯನ' ಇದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ. ಈ ಸಂಶೋಧನಾ ಕಾರ್ಯಕ್ಕೆ ಸಹಕರಿಸಿದ ಎಲ್ಲರನ್ನೂ ನಾನು ಕೃತಜ್ಞತಾ ಪೂರ್ವಕವಾಗಿ ಸ್ಮರಿಸಿಕೊಳ್ಳುತ್ತೇನೆ. ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರದಡಿಯಲ್ಲಿ ನಡೆಸಿದ ಈ ಸಂಶೋಧನಾ ಕಾರ್ಯಕ್ಕೆ ಎಲ್ಲಾ ಬಗೆಯ ವ್ಯವಸ್ಥಾಪನ ನೆರವು ನೀಡಿದವರು ಹಂಪಿ ಕನ್ನಡ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ, ಮಂಗಳೂರು. ಈ ಎರಡೂ ಪ್ರೇರಕ ಸಂಸ್ಥೆಗಳಿಗೆ ನನ್ನ ಕೃತಜ್ಞತೆಗಳು.

ಈ ಸಂಪ್ರಬಂಧ ರಚನೆಗೆ ಮಾರ್ಗದರ್ಶಕರಾಗಿ ನನಗೆ ಸೂಕ್ತ ಸಲಹೆಸೂಚನೆ, ಪ್ರೋತ್ಸಾಹ ಹಾಗೂ ಆಲೋಚನಾ ಸ್ವಾತಂತ್ರ್ಯವನ್ನು ನೀಡಿದವರು ಡಾ. ವೈ. ರವೀಂದ್ರನಾಥ ರಾವ್. ಅವರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳು.

ನನ್ನ ಸಂಶೋಧನೆಗೆ ಸಂಪೂರ್ಣ ಆಡಳಿತಾತ್ಮಕ ಸಹಕಾರ ನೀಡಿದ ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ। ಎ.ವಿ. ನಾವಡರು ಮತ್ತು

ನಿರ್ದೇಶಕರಾದ ಡಾ। ರತ್ನಾಕರ ಸದಾನಂದ ಅವರನ್ನು ಗೌರವಪೂರ್ವಕವಾಗಿ ಸ್ಮರಿಸಿಕೊಳ್ಳುತ್ತಿದ್ದೇನೆ.

ಈ ಸಂಶೋಧನೆ ಮಾಡಲು ನನಗೆ ತುಂಬುಹೃದಯದ ಸಹಕಾರ ನೀಡಿದ ಪೋಂಪೈ ಕಾಲೇಜು ಐಕಳದ ಸಂಚಾಲಕರಾದ ರೆ. ಫಾ. ಪೌಲ್ ಪಿಂಟೊ, ಪ್ರಾಂಶುಪಾಲರಾದ ಡಾ। ಜಾನ್ ಕ್ಲಾರನ್ಸ್ ಮಿರಾಂಡಾ, ಆರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಪುರುಷೋತ್ತಮ ಕೆ. ವಿ. ಮತ್ತು ಪೋಂಪೈ ಕಾಲೇಜಿನ ಕಛೇರಿ ಅಧೀಕ್ಷರಾದ ಶ್ರೀ ರೋಕಿ ಜಿ ಲೋಬೊ ಇವರೆಲ್ಲರಿಗೂ ನಾನು ಅಭಾರಿಯಾಗಿದ್ದೇನೆ.

ಅಧ್ಯಯನಕ್ಕೆ ಸಹಾಯ ನೀಡಿದ ಮಂಗಳೂರು ವಿಶ್ವವಿದ್ಯಾನಿಲಯದ ಗ್ರಂಥಪಾಲಕರಿಗೆ, ಪೋಂಪೈ ಕಾಲೇಜಿನ ಗ್ರಂಥಪಾಲಕರಾದ ಶ್ರೀ ಮೈಕಲ್ ಪಿಂಟೊ ಇವರಿಗೆ ಹಾಗೂ ಕರ್ನಾಟಕ ತಿಯೋಲಾಜಿಕಲ್ ಕಾಲೇಜಿನ ಗ್ರಂಥಪಾಲಕರಿಗೂ ನನ್ನ ಕೃತಜ್ಞತೆಗಳು.

ನನ್ನ ಸಂಶೋಧನೆಯ ಸಮಯದಲ್ಲಿ ಎಲ್ಲಾ ರೀತಿಯಲ್ಲಿ ಸಹಕಾರ ಮತ್ತು ಪ್ರೋತ್ಸಾಹವನ್ನು ನೀಡಿದ ನನ್ನ ಕುಟುಂಬಿಕರಿಗೆ ನನ್ನ ಕೃತಜ್ಞತೆಗಳು.

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ — ರಂಜಿತಾ

ಬಲ್ಮಠ, ಮಂಗಳೂರು–575001 — ಸಂಶೋಧಕರು.

ಅಧ್ಯಯನದ ವಿವರಗಳು

ಕೋಷ್ಟಕಗಳ ಪಟ್ಟಿ

ನಕ್ಷೆಗಳ ಪಟ್ಟಿ

ಭಾವಚಿತ್ರಗಳ ಪಟ್ಟಿ

ಅಧ್ಯಾಯ – 1

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ –1

ಅಧ್ಯಯನದ ಉದ್ದೇಶ, ಸ್ವರೂಪ, ಮತ್ತು ವ್ಯಾಪ್ತಿ

1.1 ಪ್ರವೇಶ

ಪ್ರಪಂಚದಲ್ಲಿ ಯಾವ ಸಮಾಜದಲ್ಲಿಯೇ ಹುಟ್ಟಿದ ಮಗು ತನ್ನ ಮೂಲಭೂತ ಹಕ್ಕು ಎಂದೇ ಶಿಕ್ಷಣವನ್ನು ಪಡೆಯಬೇಕೆಂವುದೇ ಇಂದಿನ ಶಿಕ್ಷಣದ ಪರಿಕಲ್ಪನೆಯಾಗಿದೆ. ಇಲ್ಲಿ ಯಾವುದೇ ಜಾತಿ, ಧರ್ಮ, ಬಣ್ಣ, ಲಿಂಗ, ಇತ್ಯಾದಿಗಳಿಗೆ ಪ್ರಾಧಾನ್ಯತೆ ನೀಡದೆ ಮತ್ತು ತಾರತಮ್ಯ ಮಾಡದೆ ಎಲ್ಲರೂ ಶಿಕ್ಷಣ ಪಡೆಯಬಹುದಾಗಿದೆ. ಈ ಹಿನ್ನಲೆಯಲ್ಲಿ ಈ ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಬ್ಬ ಮಗುವೂ ಮೂಲಭೂತ ಶಿಕ್ಷಣ ಪಡೆದು ಸಮಾಜದ ಆಸ್ತಿಯಾಗಬೇಕು. ದೇಶದ ಸಾಕ್ಷರತೆ ಪೂರ್ಣಗೊಳ್ಳಬೇಕೆಂದು ಪ್ರಾಥಮಿಕ ಶಿಕ್ಷಣಕ್ಕೆ ಪಿಶೇಷ ಆದ್ಯತೆ ನೀಡಬೇಕೆಂದು 1986ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಒತ್ತಿ ಹೇಳಲಾಗಿದೆ.

ಶಿಕ್ಷಣವು ಮಾನವನ ಜೀವನದಲ್ಲಿ ಪ್ರಮುಖವಾದ, ಅವಿಸ್ಮರಣೀಯವಾದ ಪಾತ್ರವನ್ನುವಹಿಸುತ್ತದೆ.ಶಿಕ್ಷಣವುಮಾನವನಷ್ಟೇ ಪುರಾತನವೂ, ಜೀವನಗಾಥೆಯು ಆಗಿದೆ. ಶಿಕ್ಷಣವು ಪ್ರಪಂಚದಾದ್ಯಂತ ಗೌರವವಾದ ಸ್ಥಾನವನ್ನು ಪಡೆದಿರುವುದನ್ನು ನಾವು ನೋಡುತ್ತಿದ್ದೇವೆ. ಶಿಕ್ಷಣವು ಮನುಷ್ಯನ ಹುಟ್ಟಿನಿಂದ ಅಂತ್ಯದವರೆಗೂ ಮಾನವನ ಜೊತೆ, ಜೊತೆಯಾಗಿ ಸಾಗುತ್ತದೆ. ಅಂದರೆ ಶಿಕ್ಷಣದ ಸಹಾಯವಿಲ್ಲದೆ ಯಾವುದೇ ವ್ಯಕ್ತಿ ಏನನ್ನು ಚಿಂತಿಸಲು, ಹಾಗೂ ಯಾವುದೇ ರೀತಿಯ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ ಎಂದು ಅರ್ಥೈಸಬಹುದಾಗಿದೆ.ಶಿಕ್ಷಣವು ಅಭಿವೃದ್ಧಿಯ ಕೀಲಿಕೈ ಎಂದು ಹೇಳಲಾಗಿದೆ ಹಾಗಯೇ ಸಮಾಜದಲ್ಲಿ ಬದಲಾವಣೆ ತರುವ ಸತ್ವಯುತ,ಶಕ್ತಿಯುತ ಸಾಧನ ಎನ್ನಲಾಗಿದೆ. ಇಂದು ಪಿಜ್ಞಾನ ತಂತ್ರಜ್ಞಾನ ಸಮಾಜದಲ್ಲಿ ಬದಲಾವಣೆ ಉನ್ನತ ಸಾಧನೆಗಳೆಂದು ಪರಿಗಣಿತವಾಗಿದ್ದರೂ ಸಮಾಜದಲ್ಲಿ ಹೊಂದಾಣಿಕೆಗಾಗಿ ಮಾನವನಿಗೆ ಶಿಕ್ಷಣ ಅತ್ಯಗತ್ಯವಾಗುತ್ತದೆ. ಶಿಕ್ಷಣದಿಂದರಾಷ್ಟ್ರೀಯ ಅಭಿವೃದ್ಧಿ, ಉತ್ಪಾದನೆ, ಜನತೆಯ ಆಕಾಂಕ್ಷೆಗಳ ಪೂರೈಕೆ ಇವುಗಳ ಪೂರೈಕೆ ಸಾಧ್ಯವಾಗುತ್ತದೆ. ೧೯೬೬ರಲ್ಲಿ ಭಾರತೀಯ ಶಿಕ್ಷಣ ಆಯೋಗವು ಶಿಕ್ಷಣವು ವ್ಯಾಪಕ ಮಟ್ಟದಲ್ಲಿ

ಶಾಂತಿಯುತವಾಗಿ ಬದಲಾವಣೆ ತರುವ, ರಕ್ತಪಾತರಹಿತಕ್ರಾಂತಿ ಉಂಟು ಮಾಡುವ ಸಾಧನವೆಂದು ಶಿಕ್ಷಣವನ್ನು ಬಣ್ಣಿಸಿದೆ.

ಶಿಕ್ಷಣ ಪದವು ಇಂಗ್ಲೀಷಿನ 'ಎಜುಕೇ ನ್' ಪದದ ಕನ್ನಡ ರೂಪವಾಗಿದ್ದು, 'ಎಜುಕೇಷನ್' ಎಂಬ ಪದ ಲ್ಯಾಟಿನ್‌ನ 'ಎಜುಕೆರೆ' ಎಜುಕೇರ್' ಮತ್ತು 'ಎಜುಕೆಟಮ್' ಪದಗಳಿಂದ ಬಂದಿದೆ. ಎಜುಕರೆ ಎಂಬ ಪದವು, ಮುಂದೆ ತೆಗೆದುಕೊಂಡು ಹೋಗು, ಹೊರಗೆಳೆ ಎಂದು ಅರ್ಥ ನೀಡುತ್ತದೆ. ಅಂದರೆ ಪ್ರತಿಯೊಬ್ಬ ವ್ಯಕ್ತಿಯು ತನಗೆ ತಿಳಿಯದಂತೆ ಹಲವಾರು ಅಂತಃ ಸತ್ವಯುತವಾದ ಸಾಮರ್ಥ್ಯಗಳನ್ನೂ ಹೊಂದಿರುತ್ತಾನೆ ಇಂತಹ ಸಾಮರ್ಥ್ಯಗಳನ್ನು ಹೊರಗೆ ತಂದು ಅದನ್ನು ಪ್ರಕಾಶಿಸುವಂತೆ ಮಾಡುವುದೇ ಶಿಕ್ಷಣ. ಅಂದರೆ ವ್ಯಕ್ತಿಯ ಸಾಮರ್ಥ್ಯ ಅರಿತು, ಅದನ್ನು ಹೊರೆಗೆಳೆದು ಅಭಿವೃದ್ಧಿಗೊಳಿಸುವುದೇ ಶಿಕ್ಷಣ. ಲ್ಯಾಟಿನ್ ಪದ ಎಜುಕೇರ್ ಎಂಬುದು ಮೇಲಕ್ಕೆ ಎತ್ತು, ತರಬೇತುಗೊಳಿಸು, ಅಚ್ಚುಗೊಳಿಸು, ರೂಪಕೊಡು ಎಂಬ ಅರ್ಥ ನೀಡುತ್ತದೆ. ವ್ಯಕ್ತಿಯಲ್ಲಿರುವ ಸಾಮರ್ಥ್ಯಗಳನ್ನು ಹೊರೆಗೆಳೆದ ನಂತರ ಶಿಕ್ಷಣ ಅದನ್ನು ಒಂದು ರೂಪಕ್ಕೆ ಕೊಡುವ ಕಾರ್ಯಮಾಡುತ್ತದೆ. ಹಾಗೂ ತನ್ನ ಸಾಮರ್ಥ್ಯ, ಶಕ್ತಿಗಳನ್ನು ಕಾರ್ಯಗತಗೊಳಿಸುವಲ್ಲಿ ಶಿಕ್ಷಣ ಸಹಾಯ ಮಾಡುತ್ತದೆ. ಈ ದೃಷ್ಟಿಯಿಂದ ಶಿಕ್ಷಣವೆಂದರೆ ತರಬೇತಿ, ಹಾಗೂ ವ್ಯಕ್ತಿಯ ಶಕ್ತಿ ಸಾಮರ್ಥ್ಯವನ್ನು ಹೊಸರೂಪದಲ್ಲಿ ಒದಗಿಸುವ ಸಾಧನ ಎಂದು ಹೇಳಲಾಗಿದೆ. ಹೀಗಾಗಿ ಶಿಕ್ಷಣ ವ್ಯಕ್ತಿಯ ಚಿಂತನೆಗಳು, ವರ್ತನೆಗಳು, ಮನೋಭಾವ ಚಾರಿತ್ರ್ಯ, ವ್ಯಕ್ತಿತ್ವ ಇವುಗಳಲ್ಲಿ ಬದಲಾವಣೆ ಉಂಟುಮಾಡಿ ಆತನನ್ನು ವಿಶಿಷ್ಟರೂಪದಲ್ಲಿ ಕಾಣುವಂತೆ ಮಾಡುತ್ತದೆ. (http://www.interlinepublishing.com/user-content-detail-view.php?cid=1710)

ಭಾರತೀಯರ ಪ್ರಕಾರ ಶಿಕ್ಷಣವು 'ವಿದ್ಯಾ' ಪದದಿಂದ ಬಂದಿದೆ. ವಿದ್ಯಾ ಎಂಬ ಪದವು 'ವಿದ್' ಎಂಬ ಧಾತುವಿನಿಂದ ಬಂದಿದೆ. ವಿದ್ ಎಂದರೆ ತಿಳಿ, ತಿಳುವಳಿಕೆ ಜ್ಞಾನ, ಅರಿವು ಎಂದಾಗುತ್ತದೆ. ಜ್ಞಾನವನ್ನು ಪಡೆಯಲ ಸಹಾಯವಾಗುವ ಅಂಶವೇ

ವಿದ್ಯೆ, ಶಿಕ್ಷಣ ಎಂದು ತಿಳಿಸುತ್ತದೆ. ಹಾಗೆಯೇ 'ಶಿಕ್ಷಾ' ಎಂಬುದು ಶಿಕ್ಷಣದ ಸಂವಾದಿಯಾದ ಪದವಾಗಿದೆ. ಶಿಕ್ಷಾ ಎಂದರೆ ಶಿಸ್ತು ಎಂಬ ಅರ್ಥದಲ್ಲಿ ಕಂಡುಬರುತ್ತದೆ. ಶಿಕ್ಷಣ ಪದಕ್ಕೆ 'ಶಿಕ್ಷಿತಂ ಅರ್ಥ ಶಿಕ್ಷಣಂ' ಅಂದರೆ ಅಜ್ಞಾಪನಗೆ

ಅರ್ಹವಾದುದು ಶಿಕ್ಷಣ ಎಂಬ ಅರ್ಥ ನೀಡಲಾಗಿದೆ. ಹೀಗಾಗಿ ಭಾರತೀಯರ ದೃಷ್ಟಿಯಲ್ಲಿ ಶಿಸ್ತು ಶಿಕ್ಷಣದ ಅವಿಭಾಜ್ಯ ಅಂಶವೆಂದು ಪರಿಗಣಿತವಾಗಿದೆ.

ಪ್ರತಿಯೊಬ್ಬ ನಾಗರಿಕನ ಮತ್ತು ಒಟ್ಟಾರೆಯಾಗಿ ರಾಷ್ಟ್ರದ ಅಭಿವೃದ್ಧಿಗೆ ಪ್ರಾಥಮಿಕ ಶಿಕ್ಷಣವು ತಳಹದಿಯಾಗಿದೆ. ಪ್ರಾಥಮಿಕ ಶಿಕ್ಷಣವನ್ನು ವಿದ್ಯಾರ್ಥಿಗಳ ಮೂಲಭೂತ ಕಲಿಕೆಯ ಅಗತ್ಯಗಳನ್ನು ಪೂರೈಸಲು ವಿನ್ಯಾಸಗೊಳಿಸಲಾಗಿದೆ. ಹೀಗೆ ಇದು ಮಾಧ್ಯಮಿಕ ಶಿಕ್ಷಣದ ಪ್ರಯೋಜನ ಪಡೆಯಲು ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವ ಇಚ್ಛೆಯನ್ನು ಹೊಂದಿದೆ. ಈ ವಿಶಾಲ ಗುರಿ ಸಾಧಿಸಲು ಪ್ರಾಥಮಿಕ ಶಿಕ್ಷಣ ಅತ್ಯಗತ್ಯ ಕಲಿಕೆಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಮತ್ತು ವಿದ್ಯಾರ್ಥಿಗಳನ್ನು ಸಬಲಗೊಳಿಸಲು ಪ್ರಾಥಮಿಕ ಶಿಕ್ಷಣವು ಸಹಕಾರಿಯಾಗಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಾಥಮಿಕ ಹಂತದ ಶಿಕ್ಷಣವನ್ನು ಹೆಚ್ಚಾಗಿ 5 ರಿಂದ 12 ವಯಸ್ಸಿನ ವಿದ್ಯಾರ್ಥಿಗಳಿಗೆ ಪೂರೈಸಲಾಗುತ್ತದೆ.: ಇತ್ತೀಚಿನ ವರ್ಷಗಳಲ್ಲಿ ಭಾರತವು ಪ್ರಾಥಮಿಕ ಶಿಕ್ಷಣ ರಂಗದಲ್ಲಿ ಅಗಾಧ ಪ್ರಗತಿ ಸಾಧಿಸಿದೆ. ಶಾಲೆಗಳಿಗೆ ನಂದಣಿಯ ದರ, ಪ್ರವೇಶ ಪಡೆದ ಮಕ್ಕಳು ಶಾಲೆಯಲ್ಲಿಯೇ ಉಳಿಯುವ ದರ ಆ ಮಕ್ಕಳ ನಿರಂತರ ಹಾಜರಾತಿ ಇವುಗಳು ಗಮನಾರ್ಹವಾಗಿ ಹೆಚ್ಚಾಗಿದೆ. ಅಲ್ಲದೆ ಸಾಕ್ಷರತೆಯ ಕಾರ್ಯಕ್ರಮವನ್ನು ಜನಸಂಖ್ಯೆಯ ಸರಿಸುಮಾರು ಮೂರನೇ ಎರಡರಷ್ಟಕ್ಕೆ ವಿಸ್ತರಿಸಲಾಗಿದೆ. ಆದುದರಿಂದಲೇ ಭಾರತದ ಎಂದಿನ ಆರ್ಥಿಕ ಅಭಿವೃದ್ಧಿಗೆ, ಪ್ರಾಥಮಿಕ ಶಿಕ್ಷಣರಂಗದಲ್ಲಿ ಆಗಿರುವ ಪ್ರಗತಿ ಒಂದು ಮುಖ್ಯ ಕಾರಣೆಂದು ಆಗಾಗ್ಗೆ ಉಲ್ಲೇಖಿಸಲಾಗುತ್ತದೆ. ಇಷ್ಟಾದರೂ ಭಾರತದಲ್ಲಿ ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಆತಂಕಕಾರಿಯಾಗಿದೆ.

ಉನ್ನತ ಶಿಕ್ಷಣದಿಂದ ಬದುಕು ರೂಪಿಸಿಕೊಳ್ಳಬಹುದಾದರೂ ಪ್ರಾಥಮಿಕ ಶಿಕ್ಷಣ ಮಾನವನ ಬದುಕಿನ ತಳಪಾಯವಾಗಿರುತ್ತದೆ.

ಈ ನಿಟ್ಟಿನಲ್ಲಿ ಬೆಳಗಾವಿಯಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯ್ದೆಯನ್ವಯ ಅನುದಾನ ರಹಿತ ಶಾಲೆಗಳಲ್ಲಿ ಶೇ. 25 ರಷ್ಟು ನೆರೆಹೊರೆಯ ವಿದ್ಯಾರ್ಥಿಗಳಿಗೆ ಉಚಿತ ದಾಖಲಾತಿ ಪ್ರಕ್ರಿಯೆ ಆರಂಭವಾಗಿದೆ.

ಅನಾದಿಕಾಲದಿಂದಲೂ ವೇದ ಉಪನಿಷತ್ತುಗಳ ಸಮುಚ್ಚಯದಲ್ಲಿ ವಿದ್ವಾಂಸರ ನಿಲುವಿನಲ್ಲಿ ವಿಭಿನ್ನವಾದ ಶಿಕ್ಷಣದ ಅರ್ಥವನ್ನು ಕೊಡುತ್ತಾ ಬಂದಿದ್ದರೂ ಅದಕ್ಕೆ ಒಂದು ನಿರ್ದಿಷ್ಟ ಅರ್ಥವನ್ನು ಸೂಚಿಸುವುದು ಕಷ್ಟ ಸಾಧ್ಯ. ಏಕೆಂದರೆ ಜೀವನ ಎಂದರೇನು? ಎಂಬುದಕ್ಕೆ ವ್ಯಾಖ್ಯಾನ ಮಾಡುವುದು ಎಷ್ಟು ಕಷ್ಟಕರವೋ ಅಷ್ಟೇ ಕಷ್ಟಕರವಾದದ್ದು.

ಶಿಕ್ಷಣ ಎಂಬ ಪದದ ಅರ್ಥ ಅರ್ಥೈಸುವುದಾಗಿದೆ. ಅಂದರೆ, ಸಮಾಜದಲ್ಲಿ ಒಬ್ಬೊಬ್ಬರ ಜೀವನ ಒಂದೊಂದು ರೀತಿಯಲ್ಲಿ ರೂಪಿಸಿಕೊಂಡು ನಡೆಸುತ್ತಿರುವುದರಿಂದ ಅಂತಹ ವೈವಿಧ್ಯಮಯ ಜೀವನಕ್ಕೆ ಸರ್ವವ್ಯಾಪ್ತಿಯಾಗಿ ಸಮುಚ್ಚಯ ರೀತಿಯಲ್ಲಿ ಒಂದೇ ವ್ಯಾಖ್ಯಾನದಲ್ಲಿ ಸೆರೆಹಿಡಿದು ಹೇಳಲಾಗದು: ಆದರೂ ಹಲವು ವಿದ್ವಾಂಸರು, ವಿಚಾರವಂತರೂ ಶಿಕ್ಷಣ ತಜ್ಞರು ಶಿಕ್ಷಣ ಎಂದರೇನು ಎಂಬುದಕ್ಕೆ ವ್ಯಾಖ್ಯಾನ ಮಾಡಿರುವುದನ್ನು ಅವಲೋಕಿಸಬಹುದು.

ವ್ಯಾಖ್ಯಾನಗಳು

ಉಪನಿಷತ್: "ಮಾನವನನ್ನು ಮೋಸ, ವಂಚನೆ, ಅಜ್ಞಾನದಿಂದ ಬಿಡುಗಡೆ ಮಾಡಿ ತಿಳುವಳಿಕೆ, ಸತ್ಯ, ನ್ಯಾಯ, ನೀತಿ, ಧೈರ್ಯ ಮೊದಲಾದ ಸದ್ಗುಣಗಳ ಕಡೆಗೆ ಕೊಂಡೊಯ್ಯುವುದೇ ಶಿಕ್ಷಣ" ಎಂದಿದೆ.

ಸ್ವಾಮಿ ವಿವೇಕಾನಂದರು: "ವಿದ್ಯೆ ಎಂದರೆ ಮೆದುಳಿನಲ್ಲಿ ಬರಿಯ ಮಾಹಿತಿ ತುರುಕುವುದಲ್ಲ, ಅಲ್ಲಿ ಜೀರ್ಣವಾಗದೆ ಆಯುಷ್ಯವಿಡೀ ಗೊಂದಲವೆಬ್ಬಿಸುವ ಒಣಜ್ಞಾನವಲ್ಲ. ವಿದ್ಯೆಯಿಂದಾಗಿ ಉಚ್ಚ ವಿಚಾರಗಳು ರಕ್ತಗತವಾಗಬೇಕು. ಜೀವನದಲ್ಲಿ ಚೈತನ್ಯ ಮೂಡುವಂತಾಗಬೇಕು. ಪೌರುಷ ಕೆರಳುವಂತಾಗಬೇಕು. ಶೀಲ ಮೈ ತುಂಬುವಂತಾಗಬೇಕು" – ಎಂದಿದ್ದಾರೆ.

ಡಾ। ಸ. ರಾಧಾಕೃಷ್ಣನ್: "ಮಕ್ಕಳು ಮಾನವರಾಗಿ, ನಾಗರಿಕರಾಗಿ ಇನ್ನೊಬ್ಬರೊಡನೆ ಮೈತ್ರಿ ಗೌರವ ಘನತೆಗಳಿಂದ ವರ್ತಿಸುವಂತೆ ಮಾಡಿ ಮಕ್ಕಳಲ್ಲಿ ಔದಾರ್ಯ, ಸಹೋದರ ಭಾವನೆ, ಸಹಾನುಭೂತಿ ಹೆಚ್ಚಾಗುವಂತೆ ಮಾಡುವುದೇ ಶಿಕ್ಷಣ" – ಎಂದಿದ್ದಾರೆ.

ರಾಸ್: "ಸ್ವಾಭಾವಿಕ ಬೆಳವಣಿಗೆಯಲ್ಲಿ ಉದ್ದಿಷ್ಟವಾದ ವ್ಯತ್ಯಾಸಗಳನ್ನು ಸಾಧಿಸುವುದೇ ಶಿಕ್ಷಣದ ಕಾರ್ಯ. ಈ ಬಗೆಯ ಕ್ರಮಬದ್ಧ ಶಿಕ್ಷಣವಿರದಿದ್ದರೆ ವ್ಯಕ್ತಿಯು ಸತ್ವವನ್ನು ಕಳೆದುಕೊಂಡು ಬೇರೆ ಏನೇನೋ ಆಗಿರಬಹುದು" ಎಂದಿದ್ದಾರೆ.

ಗಾಂಧೀಜಿ: "ಸ್ತ್ರೀ ಪುರುಷರಿಗೆ ಶಿಕ್ಷಣವನ್ನೀಯಲು ಅದೊಂದು ಸಾಧನ ಮಾತ್ರ. ಮಗು / ವ್ಯಕ್ತಿಗಳಲ್ಲಿ ಹುದುಗಿರುವ ಉನ್ನತವಾದ ಅಂಶಗಳನ್ನೆಲ್ಲ ಹೊರತೆಗೆಯುವುದೇ ಶಿಕ್ಷಣದ ಕಾರ್ಯವಾಗಿದೆ" – ಎಂದಿದ್ದಾರೆ.

ಸಾಕ್ರೆಟಿಸ್: "ಮಗು – ವ್ಯಕ್ತಿಗೆ ಸತ್ಯವನ್ನು ತಿಳಿಯಪಡಿಸಿ ಅದರಂತೆ ಅದನ್ನು ವ್ಯವಹಾರದಲ್ಲಿ ತರುವಂತೆ ಕಲಿಸುವುದೇ ಶಿಕ್ಷಣ" – ಎಂದು ಹೇಳುತ್ತಾರೆ.

ಯಾವುದೇ ವ್ಯವಸ್ಥೆಯು ಮೂರು ಅಂಶಗಳನ್ನು ಒಳಗೊಂಡಿರುತ್ತದೆ. ಅವುಗಳೆಂದರೆ ಹೂಡಿಕೆ, ಪ್ರಕ್ರಿಯೆ ಮತ್ತು ಉತ್ಪನ್ನ. ಒಳ್ಳೆಯ ಉತ್ಪನ್ನ ದೊರಕಬೇಕೆಂದರೆ ಹೂಡಿಕೆ ಮತ್ತು ಪ್ರಕ್ರಿಯೆಗಳು ಗುಣಮಟ್ಟದ್ದಿರಬೇಕು. ಇದಕ್ಕೆ ಒಂದು ಉದಾಹರಣೆ ನೀಡುವುದಾದರೆ ಯಾವುದಾದರೂ ಒಂದು ಕೈಗಾರಿಕೆಯು ಉತ್ತಮ ಉತ್ಪಾದಕತೆ ಹೊಂದಬೇಕು ಎಂದರೆ ಬಳಸುವ ಕಚ್ಚಾವಸ್ತುಗಳು ಗುಣಮಟ್ಟದ್ದಾಗಿದ್ದು, ಕಾರ್ಯನಿರ್ವಹಿಸುವ ಕಾರ್ಮಿಕರು ಶ್ರದ್ಧೆಯಿಂದ, ನವೀನ ತಂತ್ರಜ್ಞಾನ ಬಳಸಿ ಕಾರ್ಯನಿರ್ವಹಿಸಿದರೆ ಕೈಗಾರಿಕೆಯು ಉತ್ತಮ ಲಾಭ ಪಡೆಯಲು ಸಾಧ್ಯವಿದೆ. ಇದೇ ಉದಾಹರಣೆಯನ್ನು ಶಿಕ್ಷಣ ಕ್ಷೇತ್ರಕ್ಕೆ ಅನ್ವಯಿಸಿದರೆ, ಇಲ್ಲಿ ಶಾಲಾ ಕಟ್ಟಡ, ಶಿಕ್ಷಕರ ಮತ್ತು ಶಿಕ್ಷಣ ಕ್ಷೇತ್ರದ ಅವಶ್ಯವಾದ ಸಂಪನ್ಮೂಲಗಳು ಹೂಡಿಕೆ ಎನಿಸಿದರೆ, ಶಿಕ್ಷಕರು ಕೈಗೊಳ್ಳುವ ಬೋಧನೆ – ತರಬೇತಿ, ಮಾರ್ಗದರ್ಶನಗಳು ಪ್ರಕ್ರಿಯೆ ಎನಿಸಿಕೊಳ್ಳುತ್ತದೆ. ಶಿಕ್ಷಣ ಕ್ಷೇತ್ರದಲ್ಲಿನ ಹೂಡಿಕೆ ಮತ್ತು ಪ್ರಕ್ರಿಯೆಗಳಿಂದ ಹೊರಹೊಮ್ಮುವ ಮಕ್ಕಳ ಶಿಕ್ಷಣದ ಗುಣಮಟ್ಟವು ವ್ಯವಸ್ಥೆಯ ಉತ್ಪನ್ನ ಎನಿಸಿಕೊಳ್ಳುತ್ತದೆ. ಯಾವುದೇ ವ್ಯವಸ್ಥೆಯು ಹೂಡಿಕೆ ಮತ್ತು ಪ್ರಕ್ರಿಯೆಗಳಿಗೆ ನೀಡುವ ಪ್ರಾಮುಖ್ಯತೆಯಷ್ಟೇ ಗಮನವನ್ನು ಗುಣಮಟ್ಟದ ಕಡೆಗೂ ನೀಡಬೇಕು. ಇಲ್ಲದಿದ್ದರೆ ಸಂಪನ್ಮೂಲಗಳು ಅಪವ್ಯಯವಾಗುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ನಾವು ಶಿಕ್ಷಕರ ನೇಮಕಾತಿ, ಶಾಲಾ ಕಟ್ಟಡಗಳ ನಿರ್ಮಾಣ ಹಾಗೂ ಕ್ಷೇತ್ರಕ್ಕೆ ಖರ್ಚು ಮಾಡುವ ಆಯ ವ್ಯಯಕ್ಕೆ ನೀಡುವಷ್ಟು ಗಮನವನ್ನು ಇಲಾಖೆಯ ಗುಣಮಟ್ಟದ ಕಡೆ ನೀಡಬೇಕಾದಷ್ಟು ಗಮನ ನೀಡುತ್ತಿಲ್ಲ ಎಂಬುದು ಕಟು ವಾಸ್ತವ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಸಂಸ್ಥೆಯನ್ನು ಹುಟ್ಟು ಹಾಕಿ, ತನ್ಮೂಲಕ ಮಕ್ಕಳು ನಿರೀಕ್ಷಿತ ಮಟ್ಟದಲ್ಲಿ ಕಲಿಯುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ತಿಳಿಯುವುದರ ಜೊತೆಗೆ ಇಲಾಖೆಗೆ ಯಾವ ರೀತಿಯ ಕಾಯಕಲ್ಪ ನೀಡಬಹುದು ಎಂಬ ಚಿಂತನೆಗೆ ದಾರಿ ಮಾಡುತ್ತದೆ.

ಬ್ರಿಟೀಷರು ಭಾರತಕ್ಕೆ ವ್ಯಾಪಾರಕ್ಕೆ ಬಂದು ಈ ದೇಶದ ಸಂಪತ್ತು ದೋಚಬೇಕೆಂಬ ಹೆಬ್ಬಯಕೆ ಇದ್ದರೂ ಭಾರತೀಯರಿಗೆ ಶಿಕ್ಷಣ ಕೊಡುವುದರಲ್ಲಿ, ಕಳಂಕ ಮಾಡಲಿಲ್ಲ. ಆದಷ್ಟು ವರದಿಗಳನ್ನು ತಯಾರಿಸಿ ಅವುಗಳ ಮೂಲಕ

ಶಿಕ್ಷಣ ಅಭಿವೃದ್ಧಿಗೊಳಿಸಲು, ನವೀನಗೊಳಿಸಲು ವರದಿಗಳನ್ನು ಜಾರಿಗೆ ತಂದರು. ಅವುಗಳಲ್ಲಿ ಚಾರ್ಲ್ಸ್ ಉಡ್ಸ್ ವರದಿ (1854), ಹಂಟರ್ಸ್ ಆಯೋಗ (1882), ಹೌರ್ಟಿಗ್ ವರದಿ (1929), ಸಾರ್ಜೆಂಟ್ ವರದಿ (1944).

ಶಿಕ್ಷಣವು ವ್ಯಕ್ತಿಯ ಅಭಿವೃದ್ಧಿ ಮತ್ತು ಸಮಾಜದ ಅಭಿವೃದ್ಧಿಯ ಕಡೆ ಯಾವಾಗಲೂ ಕೈಚಾಚಿ ಕಾಯಕವನ್ನು ಮಾಡುವಂತದ್ದಾಗಿದೆ. ಒಂದು ದೇಶದಲ್ಲಿ ಉತ್ತಮ ಶಿಕ್ಷಣ ನೀಡಲಾಗುತ್ತಿದೆ ಎಂದರೆ ಆ ದೇಶವು ಅಭಿವೃದ್ಧಿಯತ್ತ ಗಮನ ಕೊಡುತ್ತಿದೆ ಎಂದು ಅರ್ಥ. ಹಾಗಾಗಿ ದೇಶದ ಅಭಿವೃದ್ಧಿಯು ಆ ದೇಶವು ಕೊಡುವ ಶಿಕ್ಷಣವನ್ನು ಅವಲಂಬಿಸಿರುತ್ತದೆ.

ದೇಶದ ಹಾಗೂ ಸಮಾಜದ ಗುಣಮಟ್ಟ ವ್ಯಕ್ತಿಗಳ ದಕ್ಷ ಕಾರ್ಯತತ್ಪರತೆಯ ಮೇಲೆ ನಿಂತಿದೆ. ದೇಶದ ಸಂಪನ್ಮೂಲಗಳು ಸದ್ಬಳಕೆಯಾಗಿ ದೇಶವು ಅಭಿವೃದ್ಧಿಯಾಗಬೇಕಾದರೆ ಮಾನವ ಸಂಪನ್ಮೂಲವು ಅಭಿವೃದ್ಧಿಯಾಗಬೇಕು. "ಮಾನವ ಸಂಪನ್ಮೂಲಗಳ ಅಭಿವೃದ್ಧಿಯೆಂದರೆ ಸಮಾಜದ ಎಲ್ಲಾ ಜನರ ಜ್ಞಾನ ವಿದ್ಯಾರ್ಹತೆ" ಆರೋಗ್ಯ ಕಾರ್ಯ ಸಾಮರ್ಥ್ಯತೆ, ಆ ಕೌಶಲ್ಯ ಜೀವನದ ಆದರ್ಶಗಳು ಹೆಚ್ಚಿಸುವುದಾಗಿದೆ. ಈ ರೀತಿಯ ಮಾನವ ಸಂಪತ್ತು ಆರ್ಥಿಕಾಭಿವೃದ್ಧಿಗೆ ಅನುಗುಣವಾಗುವಂತೆ ಮಾಡಿ ಜನತೆಯನ್ನು ಉತ್ತಮ ವಯಸ್ಕರರನ್ನಾಗಿ ತಯಾರಿಸಿ ಅವರ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಸರಿಯಾದ ಜ್ಞಾನ ಬೆಳೆಸಿ, ಸಾಮಾಜಿಕ ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲಗಳು ಅಭಿವೃದ್ಧಿಯಾಗುವಂತೆ ಸಂಪೂರ್ಣ ರಚನಾತ್ಮಕ ಕೆಲಸವಾಗುವಂತೆ ಶಿಕ್ಷಣ ನೀಡಬೇಕು. ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ, ವೃತ್ತಿ ತರಬೇತಿಗಳು, ಸ್ವಶಿಕ್ಷಣ, ಶೈಕ್ಷಣಿಕ ಮತ್ತು ವೃತ್ತಿ ಮಾರ್ಗದರ್ಶನ ಕಾರ್ಯಕ್ರಮಗಳು ವೈಜ್ಞಾನಿಕ ಚಿಂತನೆಗಳು, ಸರ್ಕಾರ ಮತ್ತು ಪೋಷಕರು ನೀಡುವ ಸೌಲಭ್ಯಗಳು ಮತ್ತು ನಿಯಂತ್ರಣಗಳು ಶಿಸ್ತು, ದುಡಿಮೆ, ದೇಶಭಕ್ತಿ, ಸ್ವಾಭಿಮಾನ ಆರೋಗ್ಯ ಮತ್ತು ಪೌಷ್ಠಿಕ ಆಹಾರಗಳ ಸೌಲಭ್ಯ ಮೊದಲಾದ ಅಂಶಗಳು ಮಾನವ ಸಂಪನ್ಮೂಲ ಅಭಿವೃದ್ಧಿಯಾಗಲು ಕೆಲಸ ಮಾಡುತ್ತವೆ.

ಸರ್ವರಿಗೂ ಶಿಕ್ಷಣ ಎಂಬ ಅಂಶವು 1980ರ ದಶಕದಲ್ಲಿ ಬಳಕೆಗೆ ಬಂದಿತು. ಅನಕ್ಷರತೆಯನ್ನು ತೊಡೆದು ಹಾಕಿ, ಎಲ್ಲರಿಗೂ ಅದರಲ್ಲಿಯೂ ಏಷಿಯಾನ್ ರಾಷ್ಟ್ರಗಳಲ್ಲಿ ಎಲ್ಲರಿಗೂ ಶಿಕ್ಷಣದ ಮೂಲಕ ಜ್ಞಾನ ನೀಡುವ ಬಗ್ಗೆ ಜಾಗತಿಕ ಸಂಸ್ಥೆಗಳ ಪ್ರೋತ್ಸಾಹಕ ಕ್ರಮಗಳು ಮತ್ತು ಕಾಳಜಿಗಳೇ ಇದಕ್ಕೆ ಆಧಾರವಾಗಿದ್ದವು. ಏಷಿಯನ್ ಶಿಕ್ಷಣ ಮಂತ್ರಿಗಳು ಮತ್ತು ಏಷಿಯಾ ಮತ್ತು ಫೆಸಿಫಿಕ್ ಪ್ರದೇಶದಲ್ಲಿ ಯೋಜನೆಗಳನ್ನು ರೂಪಿಸುವುದರ ಜವಾಬ್ದಾರಿ ಇರುವ

ಎಲ್ಲರೂ 1985ರಲ್ಲಿ ಜರುಗಿದ ಐದನೆಯ ಏಷಿಯನ್ ಸಮ್ಮೇಳನದಲ್ಲಿ ಸರ್ವರಿಗೂ ಶಿಕ್ಷಣ ಎಂಬುದನ್ನು ಸಾಧಿಸುವುದಕ್ಕೆ ಸಂಬಂಧಿಸಿದ ಎಲ್ಲಾ ಕಾಳಜಿಗಳನ್ನು ಕಲ್ಪಿಸಿಕೊಂಡಿತು. 1990ರ ಜೋಮ್‌ಟೀನ್ ಸಮ್ಮೇಳನವು ಸರ್ವರಿಗೂ ಶಿಕ್ಷಣದ ಗುರಿ ಸಾಧನೆಯೆಡೆಗೆ ಸ್ಪಷ್ಟ ನಿರ್ದೇಶನಗಳನ್ನು ರೂಪಿಸಿತು. ಅದರಂತೆ ಸರ್ವರಿಗೂ ಶಿಕ್ಷಣ ಎಂಬುದಕ್ಕೆ ಕೆಳಕಂಡ ಅರ್ಥ ಬರುವುದು.

ಅಂತರ್ದೇಶೀಯ ಮತ್ತು ದೇಶದೊಳಗಿರುವ ಶೈಕ್ಷಣಿಕ ಅಸಮಾನತೆಗಳನ್ನು ತೊಡೆದು ಹಾಕುವುದು. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ.ವಯಸ್ಕರ ಶಿಕ್ಷಣ ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ.

ವಿಜ್ಞಾನ, ಶಿಕ್ಷಣ, ಜನಸಂಖ್ಯಾ ಮತ್ತು ಪರಿಸರ ಶಿಕ್ಷಣ, ಕಾರ್ಯಧಾರಿತ ಶಿಕ್ಷಣ, ಪಠ್ಯ ಚಟುವಟಿಕೆಗಳನ್ನು ಉತ್ತಮಗೊಳಿಸುವುದು, ಉನ್ನತ ಶಿಕ್ಷಣಕ್ಕೆ ಒತ್ತು ನೀಡುವುದು ಮತ್ತು ಶಿಕ್ಷಣ ಶಿಕ್ಷಣದ ಅಭಿವೃದ್ಧಿ ಮತ್ತು ಉತ್ತಮಗೊಳಿಸುವಿಕೆ ಇವುಗಳು ಮೂಲಕ ಶಿಕ್ಷಣದ ಗುಣಮಟ್ಟ ಸುಧಾರಣೆ.

ಔಪಚಾರಿಕ ಮತ್ತು ಔಪಚಾರಿಕವಲ್ಲದ ಶಿಕ್ಷಣದ ನಡುವೆ ಸಂಬಂಧ ಕಲ್ಪಿಸುವುದಕ್ಕೆ ಒತ್ತು ನೀಡುವುದು. ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಯ ವಿಕೇಂದ್ರೀಕರಣ.

ಸರ್ವರಿಗೂ ಶಿಕ್ಷಣವನ್ನು ಕುರಿತ ಜಾಗತಿಕ ದೃಷ್ಟಿಕೋನಗಳು – ಇಸವಿ 2000ದಲ್ಲಿ ಸೆನೆಗಲ್‌ನ ಡಾಕರ್‌ನಲ್ಲಿ ಜರುಗಿದ ಜಾಗತಿಕ ಶಿಕ್ಷಣ ಸಮಾವೇಶವು ಜೋಮ್‌ಟೀಯನ್‌ನಲ್ಲಿ ನಡೆದ ಸಮ್ಮೇಳನದ ಒಂದು ದಶಕದ ನಂತರದ ಅನುಸರಣಾ ಕಾರ್ಯಕ್ರಮವಾಗಿತ್ತು. ಸಮಾವೇಶವು 2005 ಮತ್ತು 2015ರೊಳಗೆ ಸರ್ವರಿಗೂ ಶಿಕ್ಷಣದ ಗುರಿಗಳನ್ನು ಸಾಧಿಸಲು ರಾಷ್ಟ್ರಗಳು ಮಾಡುತ್ತಿರುವ ಯತ್ನಗಳಿಗೆ ಪರಿಣಾಮಕಾರಿಯಾದ ಬೆಂಬಲ ಒದಗಿಸಲು ಅಗತ್ಯ ಮಾರ್ಗೋಪಾಯಗಳನ್ನು ರೂಪಿಸಿ, ಸಂಪನ್ಮೂಲಗಳನ್ನು ಸಂಘಟಿಸಲು ಜಾಗತಿಕ ಉತ್ತೇಜನಾಕ್ರಮದ ಅಗತ್ಯವಿದೆ ಎಂಬುದನ್ನು ಗುರ್ತಿಸಿತು.

ಜೋಮ್‌ಟಿಯನ್ ಘೋಷಣೆ ಮತ್ತು ಕ್ರಿಯಾಯೋಜನೆಯ ಚೌಕಟ್ಟಿನ ಪರಿಣಾಮವಾಗಿ ಕೇಂದ್ರಮಟ್ಟದಲ್ಲಿ ಜವರು ನಾಯಕರ ನೇತೃತ್ವದಲ್ಲಿ "ಸರ್ವರಿಗೂ ಶಿಕ್ಷಣ ವೇದಿಕೆ"ಯನ್ನು ವಿದ್ಯುಕ್ತವಾಗಿ ರಚಿಸಲಾಗಿತ್ತು. ಅವು ಯಾವುವೆಂದರೆ,

ಯು.ಎನ್.ಡಿ.ಪಿ., ಯುನೆಸ್ಕೋ, ಯು.ಎನ್.ಎಫ್.ಪಿ.ಎ., ಯುನಿಸೆಫ್ ಮತ್ತು ವಿಶ್ವಬ್ಯಾಂಕ್. ಅವರುಗಳಿಂದ ಕೆಳಕಂಡ ಉದ್ದೇಶಗಳು ಗುರುತಿಸಲ್ಪಟ್ಟಿವೆ

1. ಎಲ್ಲರಿಗೂ ಶಿಕ್ಷಣ ಒದಗಿಸುವುದರಲ್ಲಿ ರಾಷ್ಟ್ರಗಳೂ, ಸಂಸ್ಥೆಗಳೂ, ಸಾಧಿಸಿರುವ ಪ್ರಗತಿಯ ಮೇಲುಸ್ತುವಾರಿ.
2. ವಿಶ್ವದ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸ್ಥಾನ ಇರುವುದನ್ನು ಖಚಿತಪಡಿಸುವುದು.
3. ಸರ್ವರಿಗೂ ಶಿಕ್ಷಣದ ಭಾಗೀದಾರರ ನಡುವೆ ಸಂವಾದ ಮತ್ತು ಸಹಕಾರವನ್ನು ಉತ್ತೇಜಿಸುವುದು. (ಆಧುನಿಕ ಶಿಕ್ಷಣದ ಒಲವುಗಳು, ಡಾ. ಶಶಿಕಲಾ ಮತ್ತು ಇತರರು,2011)

ಸ್ವತಂತ್ರ ಭಾರತದಲ್ಲಿ ಕಡ್ಡಾಯ ಶಿಕ್ಷಣ:

ಉಚಿತ ಮತ್ತು ಕಡ್ಡಾಯ ಶಿಕ್ಷಣದ ಗುರಿಯ ಜೊತೆಗೆ ಹತ್ತು ಹಲವು ಆಶಯಗಳನ್ನು ಹೊಂದಿದ್ದ ಸ್ವತಂತ್ರ ಭಾರತವು ತನ್ನದೇ ಆದ ಸಂವಿಧಾನವನ್ನು ರಚಿಸಿಕೊಳ್ಳುವ ಪ್ರಕ್ರಿಯೆಯ ಮೂಲಕ ಸಮಾಜವಾದಿ ಮತ್ತು ಜಾತ್ಯತೀತ ಭಾರತವನ್ನು ನಿರ್ಮಾಣ ಮಾಡುವ ಕೆಲಸವನ್ನು ಪ್ರಾರಂಭಿಸಿತು. (ಕರ್ನಾಟಕ ಶಿಕ್ಷಣದಲ್ಲಿ ಹೊಸ ಹೆಜ್ಜೆಗಳು, ಡಾ. ಆರ್. ಓಬಳೇಶಘಟ್ಟಿ, 2009)

1947–49 ಸಂವಿಧಾನ ರಚನಾ ಸಮಿತಿಯಲ್ಲಿ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ರಚನೆಯಾಗಿದ್ದ ಉಪಸಮಿತಿಯು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಸೇರಿಸಿತು.

ಅದರಂತೆ ಖಂಡ 23ರ ಅನ್ವಯ ಪ್ರತಿಯೊಬ್ಬ ನಾಗರಿಕನೂ ಉಚಿತ ಮತ್ತು ಖಡ್ಡಾಯ ಶಿಕ್ಷಣ ಪಡೆಯುವ ಹಕ್ಕನ್ನು ಹೊಂದಿದ್ದು ಇದನ್ನು ನೀಡುವ ಜವಾಬ್ದಾರಿಯು ರಾಜ್ಯದ್ದಾಗಿರುತ್ತದೆ. ಸಂವಿಧಾನ ಜಾರಿಯಾದ 10 ವರ್ಷದ ಒಳಗಾಗಿ 14 ವರ್ಷದ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವ ಯೋಜನೆ ಹಾಕಿಕೊಳ್ಳಲಾಗಿತ್ತು.

ಸಂವಿಧಾನದಲ್ಲಿ 45ನೆಯ ಪರಿಚ್ಛೇದದ ಸಾರಾಂಶವೆಂದರೆ ರಾಜ್ಯವು, ಸಂವಿಧಾನ ಪ್ರಾರಂಭವಾದ 10 ವರ್ಷದೊಳಗಾಗಿ 14 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಲು ಪ್ರಯತ್ನಿಸುತ್ತದೆ ಎಂಬುದಾಗಿದೆ.

1950 : ಸಂವಿಧಾನ ಜಾರಿಯಾದ ವರ್ಷ

1960 : ಸಂವಿಧಾನದ ವಾಗ್ದಾನದಂತೆ 1960ರ ಅಂತ್ಯಕ್ಕೆ 14 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವ ಗುರಿಯನ್ನು ನಮ್ಮಿಂದ ಈಡೇರಿಸಲು ಸಾಧ್ಯವಾಗಲಿಲ್ಲ.

1964 : ಪ್ರಾಥಮಿಕ ಶಿಕ್ಷಣವನ್ನು ಒಳಗೊಂಡಂತೆ ಭಾರತದಲ್ಲಿ ಶಿಕ್ಷಣ ಕ್ಷೇತ್ರವನ್ನು ಸಮಗ್ರವಾಗಿ ಪರಿಶೀಲಿಸುವ ದೃಷ್ಟಿಯಿಂದ ಭಾರತದ ಸರ್ಕಾರವು ಶಿಕ್ಷಣ ಆಯೋಗ (ಕೊಠಾರಿ ಆಯೋಗ)ವನ್ನು 1964ರಲ್ಲಿ ನೇಮಿಸಿತು. ವೈದ್ಯಕೀಯ ಮತ್ತು ಕಾನೂನು ಶಿಕ್ಷಣವನ್ನು ಹೊರತು ಪಡಿಸಿ ಇಡೀ ಶಿಕ್ಷಣ ಕ್ಷೇತ್ರವನ್ನು ಸಮಗ್ರವಾಗಿ ಅಧ್ಯಯನ ಮಾಡಿ ವರದಿ ಸಲ್ಲಿಸುವ ಹೊಣೆಗಾರಿಕೆಯನ್ನು ಸರ್ಕಾರ ಆಯೋಗಕ್ಕೆ ನೀಡಿತು. ಶಿಕ್ಷಣದ ಎಲ್ಲ ವಿಚಾರಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದ ಆಯೋಗವು 14 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂಬ ಸಂವಿಧಾನದ ಗುರಿಯನ್ನು ಈಡೇರಿಸಬೇಕೆಂಬ ವಿಷಯವನ್ನು ಪುನರುಚ್ಚರಿಸಿತು. ಜೊತೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕೇವಲ ಪರಿಮಾಣಾತ್ಮಕವಲ್ಲದೆ ಗುಣಾತ್ಮಕವಾಗಿಯೂ ಇರಬೇಕೆಂದು ಸೂಚಿಸಿತು. ಸಾರ್ವತ್ರೀಕರಣದ ಗುರಿಯು ಮುಂದಿನ 20 ವರ್ಷಗಳಲ್ಲಿ ಪೂರ್ಣಗೊಳ್ಳಬೇಕೆಂಬ ಆಶಯವನ್ನು ವ್ಯಕ್ತಪಡಿಸಿದ ಆಯೋಗವು 1976ರ ವೇಳೆಗೆ ಮಕ್ಕಳಿಗೆ 5 ವರ್ಷಗಳ ಗುಣಾತ್ಮಕ ಹಾಗೂ ಪರಿಣಾಮಕಾರಿ ಪ್ರಾಥಮಿಕ ಶಿಕ್ಷಣವನ್ನು ಮತ್ತು 1986ರ ವೇಳೆಗೆ ಎಲ್ಲ ಮಕ್ಕಳಿಗೆ 7 ವರ್ಷಗಳ ಗುಣಾತ್ಮಕ ಶಿಕ್ಷಣವನ್ನು ನೀಡುವ ಕೆಲಸ ಪೂರ್ಣಗೊಳ್ಳಬೇಕೆಂದು ಶಿಫಾರಸ್ಸು ಮಾಡಿತು.

1968 : ಕೊಠಾರಿ ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ ಪ್ರಥಮ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಲಾಯಿತು.

1972 : ಅತ್ಯಂತ ಹಿಂದುಳಿದ ಮತ್ತು ಅವಕಾಶ ವಂಚಿತ ಮಕ್ಕಳಿಗೆ ಶಿಕ್ಷಣ ನೀಡುವ ಸಲುವಾಗಿ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು (CABE) ಅರೆಕಾಲಿಕ ಅನೌಪಚಾರಿಕ ಶಿಕ್ಷಣವನ್ನು ನೀಡಬೇಕೆಂಬ ಶಿಫಾರಸ್ಸು ಮಾಡಿತು.

1976 : ಸಂವಿಧಾನಕ್ಕೆ 42ನೆಯ ತಿದ್ದುಪಡಿಯ ಮೂಲಕ ಶಿಕ್ಷಣವನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು. ಇದರಂತೆ ಶಿಕ್ಷಣ ನೀತಿಗಳನ್ನು ಪರಸ್ಪರ ಹೊಂದಾಣಿಕೆ ಮತ್ತು ಸಹಭಾಗಿತ್ವದಲ್ಲಿ ನಿರ್ವಹಿಸಬೇಕು.

1978 : ಶಿಕ್ಷಣ ಮಂತ್ರಾಲಯವು ರಚಿಸಿದ್ದ ಪ್ರಾಥಮಿಕ ಶಿಕ್ಷಣ ಸಾರ್ವತ್ರಿಕರಣದ ಕಾರ್ಯನಿರತ ಗುಂಪು ಶಿಕ್ಷಣದ ಸಾರ್ವತ್ರಿಕರಣಕ್ಕೆ ಸಂಬಂಧಿಸಿದಂತೆ ಒಂದು ಹೊಸ ಸೂತ್ರವನ್ನು ಶಿಫಾರಸ್ಸು ಮಾಡಿತು. ಅದರಂತೆ 6ರಿಂದ 14

ವಯಸ್ಸಿನ ಪ್ರತಿಯೊಂದು ಮಗುವು ಸಾಧ್ಯವಾದಷ್ಟು ಪೂರ್ಣಕಾಲ ಶಾಲೆಯಲ್ಲಿದ್ದು ಕಲಿಯಬೇಕು. ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿಯಿದ್ದಾಗ ಮಾತ್ರ ಅರೆಕಾಲಿಕ ಶಿಕ್ಷಣದ ವ್ಯವಸ್ಥೆ ಮಾಡಬೇಕು. ಅಂತಹ ವ್ಯವಸ್ಥೆಯಲ್ಲಿಯೂ ಕೂಡ ಎಲ್ಲ ಮಕ್ಕಳು ಕನಿಷ್ಠ ಮೂಲ ಜ್ಞಾನವಾದ ಸಾಕ್ಷರತೆ, ಗಣಿತ, ಸಾಮಾಜಿಕ ಮತ್ತು ಪೌರತ್ವ ಮೌಲ್ಯಗಳನ್ನು ಕಲಿಯಲು ನೀಡುವ ವಿಷಯದಲ್ಲಿ ಯಾವುದೇ ರಾಜಿ ಇಲ್ಲ. ಕಲಿಸುವ ವಿಷಯವು ಅರ್ಥಪೂರ್ಣವಾಗಿದ್ದು ಸಾಮಾಜಿಕ ಮತ್ತು ಆರ್ಥಿಕ ಅಗತ್ಯಗಳಿಗೆ ಸ್ಪಂದಿಸುವಂತಿರಬೇಕು. (ಕರ್ನಾಟಕ ಶಿಕ್ಷಣದಲ್ಲಿ ಹೊಸ ಹೆಜ್ಜೆಗಳು, ಡಾ. ಆರ್. ಓಬಳೇಶಘಟ್ಟಿ, 2009)

1979 : ಪ್ರಾಥಮಿಕ ಶಿಕ್ಷಣಕ್ಕೆ ವ್ಯಾಪಕ ಅವಕಾಶ Comprehensive Access to Primary Education (CAPE). 1979 ರಲ್ಲಿ ಭಾರತ ಸರ್ಕಾರವು ಯುನಿಸೆಫ್ ಸಹಯೋಗದೊಂದಿಗೆ ಪ್ರಾಥಮಿಕ ಶಿಕ್ಷಣಕ್ಕೆ ವ್ಯಾಪಕ ಅವಕಾಶ ಎಂಬ ರಾಷ್ಟ್ರೀಯ ಯೋಜನೆಯನ್ನು ಪ್ರಾರಂಭಿಸಿತು. ಇದರ ಉದ್ದೇಶ 9–14 ವರ್ಷದ ವಯೋಮಿತಿಯ ಮಕ್ಕಳ ಶೈಕ್ಷಣಿಕ ಅವಶ್ಯಕತೆಗಳನ್ನು ಅರೆಕಾಲಿಕ, ಔಪಚಾರಿಕವಲ್ಲದ ಶಿಕ್ಷಣ ಕಾರ್ಯಕ್ರಮಕ್ಕೆ ಒದಗಿಸುವುದೇ ಆಗಿತ್ತು. ಈ ಯೋಜನೆಯ ಮುಖ್ಯ ಉದ್ದೇಶ 6–14 ವರ್ಷದ ಎಲ್ಲ ಮಕ್ಕಳು ಸಾಕ್ಷರರಾಗುವಂತೆ ಮಾಡುವುದೇ ಆಗಿತ್ತು. (ಆಧುನಿಕ ಶಿಕ್ಷಣದ ಒಲವುಗಳು, ಡಾ. ಶಶಿಕಲಾ ಮತ್ತು ಇತರರು,2011)

1986 : ಕೋಠಾರಿ ಆಯೋಗವು ಶಿಫಾರಸ್ಸಿನಂತೆ ಎಲ್ಲ ಮಕ್ಕಳು ಎಂಟು ವರ್ಷಗಳ ಶಾಲಾ ಶಿಕ್ಷಣವನ್ನು ಪಡೆಯಬೇಕೆಂಬ ಗುರಿಯು 1986ರ ಅಂತ್ಯಕ್ಕೂ ಈಡೇರಲಿಲ್ಲ. ಎರಡನೇ ಬಾರಿಗೆ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಲಾಯಿತು. 1990ರ ವೇಳೆಗೆ ಎಲ್ಲ ಮಕ್ಕಳು 8 ವರ್ಷದ ಶಾಲಾ ಶಿಕ್ಷಣವನ್ನು ಮುಗಿಸಬೇಕೆಂಬ ಇಂಗಿತವನ್ನು ಹೊಸ ನೀತಿಯಲ್ಲಿ ವ್ಯಕ್ತಪಡಿಸಲಾಯಿತು.

1989 : ಎಲ್ಲಾ ಮಕ್ಕಳಿಗೆ ಗುಣಮಟ್ಟದ ಶಿಕಷಣ ಚಿಂತನೆ ರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದ್ದ ಈ ಸಂದರ್ಭದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಬದುಕು ಹಸನಾಗಬೇಕಾದರೆ ಎಲ್ಲಾ ಮಕ್ಕಳಿಗೂ ಕೆಲವು ಮೂಲಭೂತ ಅಗತ್ಯಗಳು ದೊರೆಯುವಂತಾಗಬೇಕೆಂಬ ಉನ್ನತಮಟ್ಟದ ಚರ್ಚೆಗಳು ನಡೆಯುತ್ತಿದ್ದವು. ಈ ಎಲ್ಲಾ ಚರ್ಚೆಗಳು ಕ್ರೋಢೀಕರಣಗೊಂಡು ಅಂತಿಮವಾಗಿ ಮಕ್ಕಳ ಒಡಂಬಡಿಕೆ 1989ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಅಂಗೀಕರಿಸಿ ಭಾರತ ಸರ್ಕಾರವು ಈ ಒಡಂಬಡಿಕೆಯನ್ನು 1992ರಲ್ಲಿ ಸಹಿಮಾಡಿತು.

1990: 1986ರಲ್ಲಿ ರೂಪುಗೊಂಡ ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯನ್ನು ಪುನರ್ ಪರಿಶೀಲಿಸುವ ಸಲುವಾಗಿ ಆಚಾರ್ಯ ರಾಮಮೂರ್ತಿಯವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಯಿತು.

1992 : ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದ ಮೋಹಿನಿ ಜೈನ್ ಮತ್ತು ಕರ್ನಾಟಕ ರಾಜ್ಯ ಸರ್ಕಾರದ ವಿರುದ್ಧದ ಮೊಕದ್ದಮೆಯೊಂದರಲ್ಲಿ ಸರ್ವೋಚ್ಚ ನ್ಯಾಯಾಲಯವು ಶಿಕ್ಷಣ ಒಂದು ಹಕ್ಕು ಇದಕ್ಕಾಗಿ ರಾಜ್ಯ ಸರ್ಕಾರವು ಎಲ್ಲ ಹಂತಗಳಲ್ಲಿ ನಾಗರಿಕ ಹಿತಕ್ಕಾಗಿ ಶೈಕ್ಷಣಿಕ ಸಂಸ್ಥೆಗಳನ್ನು ಒದಗಿಸಬೇಕೆಂದು ತಿಳಿಸಿತು. ಶಿಕ್ಷಣ ಪಡೆಯುವ ಅವಕಾಶ ಕೇವಲ ಶ್ರೀಮಂತ ವರ್ಗಕ್ಕೆ ಮಾತ್ರ ಸೀಮಿತವಾಗಿರಲು ಸಾಧ್ಯವಿಲ್ಲವೆಂದು ನ್ಯಾಯಾಲಯ ಅಭಿಪ್ರಾಯಪಟ್ಟಿತು. ಸಂವಿಧಾನದ 73 ಮತ್ತು 74ನೆಯ ತಿದ್ದುಪಡಿ ಮಸೂದೆ ಅನ್ವಯ ಆಡಳಿತ ವಿಕೇಂದ್ರಿಕರಣ ದೃಷ್ಟಿಯಿಂದ ಪ್ರಾಥಮಿಕ ಶಿಕ್ಷಣವನ್ನೊಳಗೊಂಡಂತೆ ಪ್ರೌಢ, ವಯಸ್ಕರ ಮತ್ತು ಅನೌಪಚಾರಿಕ ಶಿಕ್ಷಣ ನೀಡುವ ಜವಾಬ್ದಾರಿಯನ್ನು ಪಂಚಾಯತ್‌ರಾಜ್ ಸಂಸ್ಥೆಗಳಿಗೆ ನೀಡಲು ಕ್ರಮ ಕೈಗೊಳ್ಳುವಂತೆ ಎಲ್ಲಾ ರಾಜ್ಯ ಸರ್ಕಾರಗಳಿಗೆ ಸೂಚಿಸಲಾಯಿತು.

1993 : ಮತ್ತೊಂದು ಮಹತ್ವದ ಪ್ರಕರಣವು ಸರ್ವೋಚ್ಛ ನ್ಯಾಯಾಲಯದ ಮುಂದೆ ವಿಚಾರಣೆಗಾಗಿ ಬಂತು. ಆಂಧ್ರಪ್ರದೇಶ ಸರ್ಕಾರ ಮತ್ತು ಜೆ.ಪಿ. ಉನ್ನಿಕೃಷ್ಣನ್‌ರವರಿಗೆ ಸಂಬಂಧಿಸಿದ ಈ ಪ್ರಕರಣದಲ್ಲಿ ಸರ್ವೋಚ್ಛ ನ್ಯಾಯಾಲಯವು ಶಿಕ್ಷಣ ಕ್ಷೇತ್ರದ ದಿಕ್ಕನ್ನೇ ಬದಲಾಯಿಸುವ ಐತಿಹಾಸಿಕ ತೀರ್ಪೊಂದನ್ನು ನೀಡಿತು. ಭಾರತದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಮೂಲಭೂತ ಹಕ್ಕಿನ ಸ್ಥಾನಮಾನವನ್ನು ನೀಡಿತು.

1994 : ಕೇಂದ್ರದಲ್ಲಿದ್ದ ಸಂಯುಕ್ತ ಸರ್ಕಾರವು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕನ್ನಾಗಿಸಲು ತೀರ್ಮಾನಿಸಿತು. ಎಲ್ಲರಿಗೂ ಶಿಕ್ಷಣ ನೀಡುವ ಮಹತ್ವದ ಯೋಜನೆಗಳೊಂದಾದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ಮೊದಲು 7 ರಾಜ್ಯಗಲ 42 ಜಿಲ್ಲೆಗಳಲ್ಲಿ ಪ್ರಾರಂಭವಾಯಿತು.

2000 : 2000ದ ವೇಳೆಗೆ ಎಲ್ಲರಿಗೂ ಶಿಕ್ಷಣ ನೀಡುವ ಗುರಿಯನ್ನು ಭಾರತ ಸರ್ಕಾರವು ಈಡೇರಿಸದಿರುವ ಹಿನ್ನೆಲೆಯಲ್ಲಿ ಪುನಃ ಸೆನಗಲ್‌ಡಾಕರ್‌ನಲ್ಲಿ ಸಭೆ ಸೇರಿದ ಅನೇಕ ರಾಷ್ಟಗಳು 2015ರ ವೇಳೆಗಾದರೂ ಈ ಗುರಿಯನ್ನು ತಲುಪಲೇಬೇಕೆಂದು ನಿರ್ಧರಿಸಿದವು.

2001 : ಈ ಹಿಂದೆ ಸಂಸತ್ತಿನಲ್ಲಿ ಮಂಡಿಸಿದ್ದ ಸಂವಿಧಾನದ 83ನೆಯ ತಿದ್ದುಪಡಿಯನ್ನು ಮಾರ್ಪಡಿಸಿ ಸಂವಿಧಾನಕ್ಕೆ 93ನೆಯ ತಿದ್ದುಪಡಿ ಮಾಡುವುದರ ಮೂಲಕ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸುವ

ಮಸೂದೆಯನ್ನು ಸಂಸತ್ತಿನಲ್ಲಿ ಪುನರ್‌ಮಂಡಿಸಲಾಯಿತು. (ಕರ್ನಾಟಕ ಶಿಕ್ಷಣದಲ್ಲಿ ಹೊಸ ಹೆಜ್ಜೆಗಳು, ಡಾ. ಆರ್. ಓಬಳೇಶಘಟ್ಟಿ, 2009)

ಲೋಕಸಭೆಯ ನವೆಂಬರ್ 27, 2001ರಂದು ಈ ಮಸೂದೆಯನ್ನು ಸರ್ವಾನುಮತದಿಂದ ಅಂಗೀಕರಿಸಿತು. ರಾಜ್ಯಸಭೆಯಲ್ಲಿ ಮಸೂದೆಯು ಮೇ 14, 2002ರಂದು ಅಂಗೀಕರಿಸಲಾಯಿತು.

ಭಾರತದ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಅಗತ್ಯತೆಗಳು ಮತ್ತು ಉದ್ದೇಶಗಳು:

ಅನಕ್ಷರತೆ ಮತ್ತು ಅಜ್ಞಾನದಿಂದ ಬಳಲುತ್ತಿರುವ ಭಾರತ ದೇಶದಲ್ಲಿ ಸ್ವಾತಂತ್ರ್ಯ ಪಡೆದ ನಂತರ ಇವುಗಳನ್ನು ಹೋಗಲಾಡಿಸಲು ಪ್ರಾಥಮಿಕ ಶಿಕ್ಷಣ ಬಲಪಡಿಸಿ ಸರ್ವರಿಗೂ ಈ ಶಿಕ್ಷಣ ನೀಡಲು ವ್ಯಾಪಕವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಏಕೆಂದರೆ ಭಾರತದ ಭವಿಷ್ಯ ಇಂದಿನ ಮಕ್ಕಳ ಬೆಳವಣಿಗೆಯ ಮೇಲೆ ನಿಂತಿರುವುದರಿಂದ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣಗೊಳಿಸುವ ಅಗತ್ಯತೆ ಇದೆ. ಇಂತಹ ಅಗತ್ಯ ಅಂಶಗಳನ್ನು ಹೀಗೆ ಮನಗಾಣಿಸಬಹುದು!

ಭಾರತದ ಪ್ರತಿಯೊಂದು ಮಗುವನ್ನು ಅಕ್ಷರಸ್ಥ ಜ್ಞಾನಿಯನ್ನಾಗಿ ಮಾಡುವುದು, ಮಗುವನ್ನು ಸರ್ವತೋಮುಖ ಬೆಳವಣಿಗೆಯಾಗಲು ಅವಕಾಶ ಕಲ್ಪಿಸಿಕೊಡುವುದು, ಮಗು ಭವಿಷ್ಯದಲ್ಲಿ ದೇಶಕ್ಕೆ ಹೊರೆಯಾಗದೆ ತನ್ನ ಕಾಲ ದೇಶ ತಾನು ನಿಂತು ಜೀವಿಸುವಂತೆ ಮಾಡುವುದು. ಮಗು ವಿಶಾಲ ಮತ್ತು ವೈಜ್ಞಾನಿಕ ತಳಹದಿಯ ಮೇಲೆ ಬೆಳೆಯುವಂತೆ ಮಾಡುವುದು, ಶಾಲೆಯಲ್ಲಾಗುವ ಅಪವ್ಯಯ ಮತ್ತು ಸ್ಥಗಿತತೆಯನ್ನು ನಿವಾರಿಸುವುದು, ದೇಶದ ಸಾಕ್ಷರತಾ ಮಟ್ಟ ಪೂರ್ವವಾಗಿ ಸಾಧಿಸುವುದು, ಪ್ರತಿಯೊಂದು ಮಗುವಿನಲ್ಲಿ ದೇಶ, ಭಾಷಾಭಿಮಾನ ಬೆಳೆಸುವುದು, ಮಕ್ಕಳನ್ನು ಸಾಮಾಜೀಕರಣಗೊಳಿಸುವುದು, ಮಕ್ಕಳನ್ನು ಭಾವೀ ನಾಗರಿಕರನ್ನಾಗಿ ರೂಪಿಸುವುದು, ಮಕ್ಕಳಲ್ಲಿ ಸದ್ಗುಣ, ಸದ್ಭಾವನೆ, ಸನ್ನಡತೆ ಬೆಳೆಸುವುದು, ಮಗುವನ್ನು ಸತ್‌ಚಾರಿತ್ರ್ಯ ಮತ್ತು ಧೈರ್ಯವಂತನನ್ನಾಗಿ ಮಾಡುವುದು.

ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣವಾಗಲು ಪ್ರೋತ್ಸಾಹದಾಯಕ ಕ್ರಮಗಳು / ಯೋಜನೆಗಳು.

ಯೋಜನೆಗಳು : ಪ್ರತಿ ಗ್ರಾಮಗಳಲ್ಲಿ ಶಾಲೆ ತೆರೆಯುವುದು, ಉಚಿತವಾಗಿ ಪಠ್ಯಪುಸ್ತಕಗಳ ಹಂಚಿಕೆ, ವಿದ್ಯಾರ್ಥಿವೇತನ ಕೊಡುವುದು, ಮಧ್ಯಾಹ್ನ ಬಿಸಿಯೂಟ / ಅಕ್ಷರ ದಾಸೋಹ, ಸಮವಸ್ತ್ರ ಉಚಿತವಾಗಿ

ವಿತರಿಸುವುದು, ಪೋಷಕರಿಗೆ ಸೂಕ್ತ ಸಲಹೆ, ಮಾರ್ಗದರ್ಶನ ಕೊಡುವುದು, ಕಪ್ಪು ಹಲಗೆ ಕಾರ್ಯಾಚರಣೆ, ಕಟ್ಟಡಗಳ ನಿರ್ಮಾಣ, ಸರ್ವಶಿಕ್ಷಣ ಅಭಿಯಾನ,ಉತ್ತಮ ಶಿಕ್ಷಕರ ನೇಮಕ ಮತ್ತು ತರಬೇತಿ, ಬೈಸಿಕಲ್ ಯೋಜನೆ.

ಕಾರ್ಯಕ್ರಮಗಳು : ಚಿನ್ನರ ಅಂಗಳ, ಕೂಲಿಯಿಂದ, ಬೀದಿಯಿಂದ ಶಾಲೆಗೆ, ಸದಾ ಶಾಲೆ, ಪರ್ಯಾಯ ಶಾಲೆ,

ಪ್ರತಿಭಾ ಕಾರಂಜಿ, ಬಾ ಮರಳಿ ಶಾಲೆಗೆ, ಬಾ ಬಾಲೆ ಶಾಲೆಗೆ, ಸಂಚಾರಿ ಶಾಲೆ, ಶಿಕ್ಷಣ ಕ್ರಾಂತಿ ಶಾಲೆ

ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣ ಮತ್ತು ಕಡ್ಡಾಯವಾಗದಿರುವುದಕ್ಕೆ ಕಾರಣಗಳು:

ಪೋಷಕರ ಅಜ್ಞಾನ ಮತ್ತು ಬಡತನ, ಆಕರ್ಷಕ ಶಾಲೆಗಳಿಲ್ಲದಿರುವುದು , ಲೆಕ್ಕವಿಲ್ಲದ ದಾಖಲಾತಿಗಳು, ಶಾಲೆಗಳು ದೂರವಿರುವುದು, ಮನೋವ್ಯಾಕುಲತೆ, ದುಡಿಮಗೆ ಮಾರುಹೋಗುವುದು, ದೈಹಿಕ ದೌರ್ಬಲ್ಯಗಳು, ನಿರ್ಲಕ್ಷ್ಯ.

ಪ್ರಾಥಮಿಕ ಪ್ರೌಢಶಾಲಾ ಶಿಕ್ಷಣದಲ್ಲಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಶಿಕ್ಷಣ ತಜ್ಞರು ಸರ್ಕಾರಕ್ಕೆ ಸಲಹೆ ಮತ್ತು ಮಾರ್ಗದರ್ಶನ ರೂಪದಲ್ಲಿ ಅನೇಕ ಯೋಜನೆಗಳನ್ನು ಜಾರಿಗೊಳಿಸಲು ತಿಳಿಸುತ್ತಿದ್ದಾರೆ.

ಅವುಗಳೆಂದರೆ–

ಜನಸಂಖ್ಯಾ ನಿಯಂತ್ರಣ, ಶಾಲಾ ವಾತಾವರಣವನ್ನು ಆಕರ್ಷಣೀಯಗೊಳಿಸುವುದು, ಎಲ್ಲಾ ಮಕ್ಕಳಿಗೂ ಉಚಿತವಾಗಿ ಪಠ್ಯಪುಸ್ತಕ, ಸಮವಸ್ತ್ರ ಮತ್ತು ಮಧ್ಯಾಹ್ನದ ಬಿಸಿಯೂಟ ನೀಡುವುದು, ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಉಚಿತ ಸಲಕರಣೆಗಳನ್ನು ನೀಡುವುದು., ಶಿಕ್ಷಕರ ಕೊರತೆಯನ್ನು ನೀಗಿಸುವುದು, ಸಮುದಾಯದ ಅಗತ್ಯತೆಗೆ ಅನುಗುಣವಾಗಿ ಪಠ್ಯಕ್ರಮ ರೂಪಿಸುವುದು, ಶಾಲಾ ಕಟ್ಟಡ, ಪೀಠೋಪಕರಣ, ಪಾಠೋಪಕರಣ, ಆಟದ ಮೈದಾನ, ಶೌಚಾಲಯ, ಕುಡಿಯುವ ನೀರು ಮುಂತಾದ ಸೌಲಭ್ಯಗಳನ್ನು ಒದಗಿಸುವುದು ಇತ್ಯಾದಿ ಬೃಹತ್ ಕಾರ್ಯಕ್ರಮಗಳನ್ನು ಹಾಕಿಕೊಂಡು ಸರ್ಕಾರ ಸಮರೋಪಾದಿಯಲ್ಲಿ ಶೈಕ್ಷಣಿಕ ಸಾರ್ವತ್ರೀಕರಣದ ಹಾದಿಗೆ ಪ್ರಮುಖ ಉಪಕ್ರಮಗಳನ್ನು ಅಳವಡಿಸಿದೆ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಪ್ರೋತ್ಸಾಹದಾಯಕ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

ಸಾರ್ವತ್ರಿಕ ದಾಖಲಾತಿ ಮತ್ತು ಶಾಲೆಯಲ್ಲಿ ಉಳಿಸಿಕೊಳ್ಳುವಿಕೆಯನ್ನು ದೃಢಪಡಿಸಿಕೊಳ್ಳುವ ನಿಟ್ಟಿನಲ್ಲಿ ರಾಜ್ಯದಲ್ಲಿ ಸುವಿಸ್ತಾರವಾದ ಯೋಜನೆಗಳಿವೆ. ವಿದ್ಯಾವಿಕಾಸ ಯೋಜನೆಯಲ್ಲಿ 1ರಿಂದ 7ನೇ ತರಗತಿಯ ಶಾಲಾ ಮಕ್ಕಳ ಉಚಿತ

ಪಠ್ಯಪುಸ್ತಕ ಹಾಗೂ ಸಮವಸ್ತ್ರವನ್ನು ಮಕ್ಕಳು ಪಡೆಯುತ್ತಾರೆ. ಮಧ್ಯಾಹ್ನದ ಬಿಸಿ ಊಟದ ಯೋಜನೆ, ಉಚಿತ ಸೈಕಲ್ ವಿತರಣೆ, 'ಅಕ್ಷರ ದಾಸೋಹ' ವನ್ನು ಮೊದಲಿಗೆ ಉತ್ತರ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಪ್ರಾರಂಭಿಸಿದ್ದು, ತದನಂತರ ಇದನ್ನು ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಶಾಲೆಗಳಲ್ಲಿ ಒಂದರಿಂದ ಏಳನೇ ತರಗತಿಯಲ್ಲಿ ಓದುತ್ತಿರುವ ಎಲ್ಲಾ ಮಕ್ಕಳಿಗೂ ವಿಸ್ತರಿಸಲಾಯಿತು. ಇದು 70 ಲಕ್ಷಕ್ಕೂ ಹೆಚ್ಚಿನ ಮಕ್ಕಳಿಗೆ ಸಹಾಯಕವಾಗಿದ್ದು, ಇದರ ವೆಚ್ಚವು ವಾರ್ಷಿಕ ಸುಮಾರು ರೂ. 280 ಕೋಟಿಗಳಷ್ಟು ಆಗುತ್ತದೆ.

ಮಧ್ಯಾಹ್ನ ಬಿಸಿಯೂಟ /ಅಕ್ಷರ ದಾಸೋಹ :

ಸರಕಾರದ ಪ್ರೋತ್ಸಾಹದಾಯಕ ಯೋಜನೆಗಳಲ್ಲಿ ಅಕ್ಷರ ದಾಸೋಹ ಯೋಜನೆಯು ಅತ್ಯಂತ ಶ್ರೇಷ್ಠವಾದ ಯೋಜನೆಯಾಗಿದೆ. ಆದೇಶ ಸಂಖ್ಯೆ ಇಡೀ 20 ಎಂ.ಎಂ.ಎಸ್. 2000 (ಭಾ) ದಿನಾಂಕ 1–10–2001ರ ರಾಜ್ಯ ಈಶಾನ್ಯ ಭಾಗದಲ್ಲಿ ಶೈಕ್ಷಣಿಕವಾಗಿ ಹಿಂದುಳಿದಿರುವ ಏಳು ಜಿಲ್ಲೆಗಳಾದ ರಾಯಚೂರು, ಕೊಪ್ಪಳ, ಗುಲ್ಬರ್ಗಾ, ಬೀದರ್, ಬಳ್ಳಾರಿ, ಬಾಗಲಕೋಟೆ ಮತ್ತು ಬಿಜಾಪುರ ಸರ್ಕಾರಿ ಪ್ರಾಥಮಿಕ ಶಾಲೆಗಳ ಒಂದರಿಂದ ಐದನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಮಧ್ಯಾಹ್ನ ಊಟ ನೀಡುವ ಕಾರ್ಯಕ್ರಮ 2002 ಜೂನ್ 1ರಿಂದ ಪ್ರಾರಂಭಗೊಂಡಿದೆ. (ಕರ್ನಾಟಕ ಶಿಕ್ಷಣದಲ್ಲಿ ಹೊಸ ಹೆಜ್ಜೆಗಳು, ಡಾ. ಆರ್. ಓಬಳೇಶಘಟ್ಟಿ, 2009)

ಈ ಕಾರ್ಯಕ್ರಮದ ಮುಖ್ಯ ಉದ್ದೇಶಗಳು:

ದಾಖಲಾತಿ ಹಾಗೂ ಹಾಜರಾತಿಯನ್ನು ಉತ್ತಮಪಡಿಸುವುದು, ಶಾಲೆಯನ್ನು ಮಧ್ಯದಲ್ಲಿ ತೊರೆಯುವುದನ್ನು ತಪ್ಪಿಸುವುದು, ಪೌಷ್ಟಿಕತೆಯನ್ನು ಹೆಚ್ಚಿಸುವುದರ ಮೂಲಕ ಮಕ್ಕಳ ಆರೋಗ್ಯ ವೃದ್ಧಿಸುವುದು, ಕಲಿಕೆಯ ಮಟ್ಟವನ್ನು ಉತ್ತಮಪಡಿಸುವುದು, ಯೋಜನೆಯ ಲಾಭ ರಾಜ್ಯದ ಎಲ್ಲಾ ಮಕ್ಕಳಿಗೂ ದೊರೆಯುವಂತೆ ಮಾಡುವ ಸಲುವಾಗಿ. ಸರ್ಕಾರದ ಆದೇಶ ಸಂಖ್ಯೆ ಇಡೀ 24 ಎಂ.ಎಂ.ಎಸ್ 2003 ದಿನಾಂಕ 5–6–2003ರ ಪ್ರಕಾರ 2003., ಜುಲೈ 1ರಿಂದ ರಾಜ್ಯದ ಉಳಿದ ಜಿಲ್ಲೆಗಳಿಗೂ ಅಕ್ಷರ ದಾಸೋಹ ಹೆಸರಿನಡಿ ವಿಸ್ತರಿಸಲಾಗಿದೆ.

ಪ್ರಸ್ತುತ ಅಕ್ಷರ ದಾಸೋಹ ಯೋಜನೆಯ ಉದ್ದೇಶಗಳು ಎಷ್ಟರ ಮಟ್ಟಿಗೆ ಸಾಧಿತವಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳುವಲ್ಲಿ ನಡೆಸಿದ ಒಂದು ಪ್ರಯತ್ನ ಪ್ರಸ್ತುತ ಪ್ರಬಂಧವಾಗಿದೆ.

1.2 ಅಧ್ಯಯನದಲ್ಲಿ ಕೈಗೆತ್ತಿಕೊಂಡ ಸಮಸ್ಯೆ

ಭಾರತವೊಂದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಿದ್ದು ಇಲ್ಲಿ ಬಡತನ, ನಿರುದ್ಯೋಗ, ಹಣದುಬ್ಬರದಂತಹ ಕೆಲವು ಸಮಸ್ಯೆಗಳು ಭಾರತದ ಲಕ್ಷಣಗಳಲ್ಲೊಂದಾಗಿದೆ. ಈ ಬಡತನದಿಂದಾಗಿ ಭಾರತದಲ್ಲಿ ಅನಕ್ಷರತೆಯೆನ್ನುವುದು ಇನ್ನೂ ವಾಸಿಯಾಗದೆ ಉಳಿದಿದೆ. ಭಾರತದಲ್ಲಿ ಸಾಕ್ಷರತೆಯು 2001ರ ಹೊತ್ತಿಗೆ 64.83% ಆಗಿದ್ದು 2011ರ ಹೊತ್ತಿಗೆ 74.04%ಗೆ ಏರಿಕೆಯಾಗಿದ್ದು 9.21% ಹೆಚ್ಚಾಗಿದೆ.

(http://www.livemint.com/.../india82175-literacy-rate-rises_to-74-census.html)

ಕರ್ನಾಟಕದ ಸಾಕ್ಷರತೆಯು 2001ರಲ್ಲಿ 66.64%, 2011ರಲ್ಲಿ 75.6%ಗೆ ಏರಿಕೆಯಾಗಿದೆ. 2013ರಲ್ಲಿ 78.6%ಆಗಿರುತ್ತದೆ.(http://www.en.wikipedia.org/wiki/Indian_states_ranking_by_literacy_rate.)

ಆದರೆ ಸರಕಾರ ಮಾಡಿರುವ ಯೋಜನೆಗಳಿಗನುಗುಣವಾಗಿ ಮಹತ್ತರವಾದ ಪ್ರಗತಿ ಆಗಿಲ್ಲ. ಸರಕಾರ ಸಾಕ್ಷರತೆಯನ್ನು ಸಾಧಿಸಲು ಎಷ್ಟೋ ಯೋಜನೆಗಳನ್ನು ಮಾಡಿದರೂ ಅದು ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ಇದಕ್ಕೆ ಪೋಷಕರ ಅಜ್ಞಾನವು ಕಾರಣವಾಗುತ್ತದೆ. ಅಮರ್ತ್ಯಸೇನ್ (ಅಭಿವೃದ್ಧಿ ಅರ್ಥಶಾಸ್ತ್ರ, ಡಾ. ಬಿ. ಪ್ರಭಾಕರ ಶಿಶಿಲ, 2013) ಹೇಳುವಂತೆ ಭಾರತದಲ್ಲಿ ಬಡತನವಿರುವುದಕ್ಕೆ ಆಹಾರದ ಕೊರತೆ ಕಾರಣವಲ್ಲ. ಅದು ಸಮನಾಗಿ ಹಂಚಿಕೆಯಾಗದಿರುವುದು ಕಾರಣವಾಗಿದೆ. ಇಂತಹ ಬಡತನವಿರುವ ಕುಟುಂಬಗಳಲ್ಲಿ ಪೋಷಕರಿಗೆ ತಮ್ಮ ಮಕ್ಕಳ ಶಿಕ್ಷಣದ ಪ್ರಾಮುಖ್ಯತೆಯ ಅರಿವಿಲ್ಲದುದರಿಂದ ಬಹುತೇಕ ಪೋಷಕರು ಮಕ್ಕಳನ್ನೇ ಶಾಲೆಗೆ ದಾಖಲು ಮಾಡುವುದಿಲ್ಲ. ಸಮಾಜವು ಪೋಷಕರಿಗೆ ತಮ್ಮ ಮಕ್ಕಳನ್ನು ಶಾಲೆಗೆ ದಾಖಲು ಮಾಡಲು ಅಗತ್ಯವಾದ ಮಾಹಿತಿ ಮತ್ತು ಪ್ರೇರಣೆಗಳನ್ನ ಒದಗಿಸುತ್ತಿಲ್ಲ.

ಜನರ ಬಗ್ಗೆ ಶಿಕ್ಷಣ ಅಧಿಕಾರಿಗಳ ಅಸಡ್ಡೆಯ ಮನೋಭಾವವು ಸರಕಾರದ ಯೋಜನೆಗಳು ಜನರಿಗೆ ತಲುಪದೆ ಶಾಲೆಗಳಲ್ಲಿ ದಾಖಲಾತಿ ಕಡಿಮೆಯಿರಲು ಕಾರಣವಾಗುತ್ತದೆ.

ಅಮರ್ತ್ಯಸೇನ್‌ರ ಪ್ರಕಾರ ಬಡತನಕ್ಕೆ ದಾರಣಶಕ್ತಿಯ ಸಾಮರ್ಥ್ಯದ ಕೊರತೆ ಕಾರಣವಾಗಿದೆ. ಇದಕ್ಕೆ ಅನಕ್ಷರತೆ ಕಾರಣವಾಗುತ್ತದೆ. (ಅಭಿವೃದ್ಧಿ ಅರ್ಥಶಾಸ್ತ್ರ, ಡಾ. ಬಿ. ಪ್ರಭಾಕರ ಶಿಶಿಲ, 2013) ಆರ್ಥಿಕ ತೊಂದರೆಗಳು ಅನೇಕ

ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೇ ದುಡಿಸಿಕೊಂಡು ಅವರು ತರುವ ಹಣವನ್ನು ಅವಲಂಬಿಸಿರುವಂತೆ ಮಾಡುತ್ತವೆ. ಹೀಗೆ ಇಂದಿನ ತಮ್ಮ ಅನುಕೂಲಕ್ಕಾಗಿ ಮಕ್ಕಳ ಮುಂದಿನ ಭವಿಷ್ಯವನ್ನು ನಿರ್ಲಕ್ಷಿಸುತ್ತಾರೆ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಮೂಲಭೂತ ಸಮಸ್ಯೆಗಳು.

1. ಅಪವ್ಯಯ ಮತ್ತು ಸ್ಥಗಿತ

ಅಪವ್ಯಯ ಎಂದರೆ ವಿದ್ಯಾರ್ಥಿಗಳು ಶಾಲೆಯನ್ನು ನಡುವೆಯೇ ಬಿಡುವುದು ಎಂದರ್ಥ. ಎಂದರೆ, ಇಂದಿನ ಸನ್ನಿವೇಶದಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸುವ ಮೊದಲೇ ಶಾಲೆ ಬಿಡುವುದು ಎಂದರ್ಥ.

ಸ್ಥಗಿತ ಎಂದರೆ ತರಗತಿಯಲ್ಲಿ ಅನುತ್ತೀರ್ಣರಾಗುವುದು ಎಂದರೆ, ಅದೇ ತರಗತಿಯಲ್ಲಿ ಮತ್ತೊಂದು ವರ್ಷ ಓದುವುದು. (ಆಧುನಿಕ ಶಿಕ್ಷಣದ ಒಲವುಗಳು, ಡಾ. ಶಶಿಕಲಾ ಮತ್ತು ಇತರರು,2011)

2. ದೀರ್ಘ ಗೈರು ಹಾಜರಿ:

ಪ್ರಾಥಮಿಕ ಶಿಕ್ಷಣದಲ್ಲಿ ಇತ್ತೀಚಿನ ವರ್ಷಗಳಲ್ಲಿ ದಾಖಲಾತಿಯ ಪ್ರಮಾಣ ಹೆಚ್ಚಿರುವುದು ಕಂಡರೂ ತರಗತಿಯಲ್ಲಿ ನಿಜಸ್ಥಿತಿ ತೃಪ್ತಿಕರವಾಗಿಲ್ಲ. ಹೆಚ್ಚಿನ ಸಂಖ್ಯೆ ಮಕ್ಕಳು ತೀರಾ ಅನಿಯಮಿತವಾಗಿ ಹಾಜರಾಗುತ್ತಾರೆ ಮತ್ತು ಅನೇಕ ಕಾರಣಗಳಿಂದಾಗಿ ದೀರ್ಘಕಾಲ ಗೈರು ಹಾಜರಾಗುತ್ತಾರೆ ಎಂದು ಸಮೀಕ್ಷೆಗಳು ತೋರಿಸಿವೆ.

3. ಶಾಲೆಯಿಂದ ಮಧ್ಯದಲ್ಲೇ ಹೊರ ಬರುವುದು

ಪ್ರಾಥಮಿಕ ಶಿಕ್ಷಣ ವ್ಯಾಪಕವಾಗಿ ಹರಡಿದ್ದರೂ ಸಹ ಸಂವಿಧಾನದ ನಿರ್ದೇಶನವಾದ ಸಾರ್ವತ್ರೀಕರಣವನ್ನು ಸಾಧಿಸುವಲ್ಲಿ ಬಹಳ ದೂರಸಾಗಬೇಕಾಗಿದೆ. ಈ ಕಾರಣದಿಂದಲೇ ಭಾರತದಲ್ಲಿ ಪ್ರಾಥಮಿಕ ಶಿಕ್ಷಣದ ಲೋಟವು 2/3 ರಷ್ಟು ತುಂಬಿದ್ದು 1/3ರಷ್ಟು ಖಾಲಿ ಎಂದು ಶಿಕ್ಷಣ ತಜ್ಞರಲ್ಲೊಬ್ಬರು ಹೇಳಿದ್ದಾರೆ.

ಮಕ್ಕಳು ಮಧ್ಯದಲ್ಲೇ ಶಾಲೆ ಬಿಡಲು ಪೋಷಕರ ಬಡತನ, ಶಿಕ್ಷಣದ ಮಹತ್ವದ ಬಗ್ಗೆ ಪೋಷಕರಿಗೆ ಅರಿವಿಲ್ಲದಿರುವುದು, ಶಾಲೆಗಳಲ್ಲಿ ಹಿತಕರ ವಾತಾವರಣ ಇಲ್ಲದಿರುವುದು, ಶಾಲೆಯ ರೂಢಿಗಳಲ್ಲಿ ಪುರಾತನತೆ, ಕಂಪನಿಗಳಲ್ಲಿ, ಕಾರ್ಖಾನೆಗಳಲ್ಲಿ, ಅಂಗಡಿಗಳಲ್ಲಿ ಉದ್ಯೋಗಗಳ ಲಭ್ಯತೆ, ಮಕ್ಕಳ ದೈಹಿಕ ಆರೋಗ್ಯದ ಕೊರತೆ, ಪೋಷಕರ ಮತ್ತು ಶಿಕ್ಷಕರ ನಡುವಿನ ಸಂಪರ್ಕದ ಕೊರತೆ ಇವೆಲ್ಲ ಕಾರಣವಾಗುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ಈ ಮೇಲ್ಕಂಡ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಸರಕಾರ ಮಾಡಿರುವ ಇಷ್ಟೊಂದು ಯೋಜನೆಗಳು ಈ ಸಮಸ್ಯೆಗಳನ್ನು ನಿವಾರಿಸುವಲ್ಲಿ ಫಲಕಾರಿಯಾಗಿಲ್ಲವೇ? ಅಕ್ಷರ ದಾಸೋಹ ಯೋಜನೆಗಳಂತಹ ಬೃಹತ್ ಯೋಜನೆಗಳು ಬಡತನದ ಸಮಸ್ಯೆಯನ್ನು ನಿವಾರಿಸಿ ಮಕ್ಕಳು ಶಾಲೆಯಲ್ಲಿ ಉಳಿದುಕೊಳ್ಳುವುದಕ್ಕೆ ಕಾರಣವಾಗಿವೆಯೇ?

1.3 ಅಧ್ಯಯನದ ಮಹತ್ವ

ಪ್ರಸ್ತುತ ಅಧ್ಯಯನವು ಅನುಭವಾತ್ಮಕ ಮತ್ತು ಇತರ ವೈಜ್ಞಾನಿಕ ವಿಧಾನಗಳ ಆಧಾರದಲ್ಲಿ ನಡೆಸಲಾಗುವ ಮೌಲ್ಯಮಾಪನ ಅಧ್ಯಯನವಾಗಿದೆ. ಈ ಕಾರ್ಯಕ್ರಮದಿಂದ ಉಂಟಾಗುತ್ತಿರುವ ಪರಿಣಾಮಗಳನ್ನು ಕಂಡುಕೊಳ್ಳಲಾಗುವುದು.

ಶಿಕ್ಷಣ ಇಲಾಖೆಯ ಸದರಿ ಅಧ್ಯಯನದ ಆಧಾರದ ಮೇಲೆ ಅನೇಕ ಸುಧಾರಣಾ ಕ್ರಮಗಳನ್ನು ತಿಳಿದುಕೊಳ್ಳಲಾಗುವುದು. ಪ್ರಸ್ತುತ ಅಧ್ಯಯನವು ಶಿಕ್ಷಣಶಾಸ್ತ್ರ, ಅಭಿವೃದ್ಧಿ ಅಧ್ಯಯನ, ಶೈಕ್ಷಣಿಕ ಸಮಾಜಶಾಸ್ತ್ರಗಳಾಗಿ ಕೊಡುಗೆ ಮಾಡಬಲ್ಲದು.

1.4 ಅಧ್ಯಯನದ ಉದ್ದೇಶಗಳು

1. ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಹಮ್ಮಿಕೊಂಡ ವಿವಿಧ ಶೈಕ್ಷಣಿಕ ಯೋಜನೆಗಳ ಬಗ್ಗೆ ತಿಳಿದುಕೊಳ್ಳುವುದು.
2. ಸರಕಾರದ ಅಕ್ಷರ ದಾಸೋಹ ಯೋಜನೆಯ ಅನುಷ್ಠಾನದ ಪಾತ್ರವನ್ನು ಮತ್ತು ಒಳಿತು ಕೆಡುಕುಗಳನ್ನು ವಿಶ್ಲೇಷಿಸುವುದು.

3. ಊಟದ ತಯಾರಿಕೆ ಮತ್ತು ವಿತರಣೆಗೆ ಸಂಬಂಧಿಸಿದಂತೆ ಸ್ಥಳೀಯವಾಗಿರುವ ಮೂಲ ಸೌಲಭ್ಯಗಳ ತೊಡಕುಗಳನ್ನು ಗುರುತಿಸುವುದು ಮತ್ತು ಯೋಜನೆಯ ಅನುಷ್ಠಾನದಲ್ಲಿ ಹೊಸ ಸುಧಾರಣೆಗಳನ್ನು ಗುರುತಿಸುವುದು.

1.5 ಅಧ್ಯಯನದ ಊಹೆಗಳು

1. ಸರಕಾರದ ಅಕ್ಷರ ದಾಸೋಹ ಯೋಜನೆಯಿಂದ ಶಿಕ್ಷಣಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದೆ.
2. ನಿರ್ದಿಷ್ಟವಾಗಿ ಅಕ್ಷರ ದಾಸೋಹ ಯೋಜನೆಯಿಂದ ಮಕ್ಕಳ ದಾಖಲಾತಿ ಪ್ರಮಾಣ ಹೆಚ್ಚಾಗಿದೆ.
3. ಹಾಗೆಯೇ ಸರಕಾರದ ಅಕ್ಷರ ದಾಸೋಹ ಯೋಜನೆಯಿಂದ ಮಕ್ಕಳ ಪೌಷ್ಠಿಕತೆಯ ಮಟ್ಟವು ಹೆಚ್ಚಾಗಿದೆ.
4. ಊಟದ ತಯಾರಿಕೆ ಮತ್ತು ವಿತರಣೆಗೆ ಸಂಬಂಧಿಸಿ ಮೂಲ ಸೌಲಭ್ಯಗಳ ತೊಡಕುಗಳು ಇವೆ.

1.6 ಅಧ್ಯಯನದ ವಿಧಾನಗಳು

ಪ್ರಸ್ತುತ ಅಧ್ಯಯನಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕನ್ನು ಆಯ್ದುಕೊಳ್ಳಲಾಗಿದೆ.

ಭಾರತದ ಕರ್ನಾಟಕ ರಾಜ್ಯದ ಪಶ್ಚಿಮ ಕರಾವಳಿ ತೀರದಲ್ಲಿರುವ ಮಂಗಳೂರು ನಮ್ಮ ದೇಶದ ಒಂದು ಪ್ರಮುಖ ವಾಣಿಜ್ಯ ನಗರವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಛೇರಿ ಎಂದೇ ಗುರುತಿಸಲ್ಪಡುವ ಮಂಗಳೂರು ಭಾರತದ ಪ್ರಮುಖ ತೀರ ಪ್ರದೇಶದ ವಾಣಿಜ್ಯ ನಗರ ಅನ್ನಿಸಿಕೊಂಡಿದೆ. ಈ ನಗರವು ಶಿಕ್ಷಣ, ಬ್ಯಾಂಕಿಂಗ್, ಹಾಗೂ ಕೈಗಾರಿಕಾ ಕೇಂದ್ರವಾಗಿದೆ.

ಕರ್ನಾಟಕ ರಾಜ್ಯದ ನಕ್ಷೆ



ದಕ್ಷಿಣ ಕನ್ನಡ ಜಿಲ್ಲೆಯ ನಕ್ಷೆ



ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರಸ್ಥಳ ಮಂಗಳೂರು ನಗರವು ನೇತ್ರಾವತಿ ಹಾಗೂ ಗುರುಪುರ ನದಿಗಳ ಸಂಗಮದಲ್ಲಿದೆ. ಮಂಗಳೂರು ನಗರವು ಉತ್ತರಕ್ಕೆ $12^{0}-52^{0}$ ಅಕ್ಷಾಂಶ ಮತ್ತು ಪೂರ್ವಕ್ಕೆ $74^{0}-49^{0}$ ರೇಖಾಂಶದಲ್ಲಿ ಗುರುತಿಸಲ್ಪಟ್ಟಿದೆ. ಪೂರ್ವದಿಂದ ಪಶ್ಚಿಮ ಘಟ್ಟಗಳು, ಪಶ್ಚಿಮದಲ್ಲಿ ಅರಬ್ಬಿ ಸಮುದ್ರ ಈ ನಗರವನ್ನು ಸುತ್ತುವರಿದಿದೆ. ಮಹಾರಾಷ್ಟ್ರದ ಪಾನ್ವೆಲ್‌ನಿಂದ ಕನ್ಯಾಕುಮಾರಿವರೆಗೆ ಸಂಪರ್ಕ ಕಲ್ಪಿಸುವ 1296 ಕಿ.ಮೀ ಉದ್ದದ ಭಾರತದ ಎಳನೇ ಅತೀದೊಡ್ಡ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 17, ಮಂಗಳೂರು ಹಾಗೂ ಬೆಂಗಳೂರು ನಡುವಿನ ಸಂಪರ್ಕ ಕಲ್ಪಿಸುವ 328ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 75 ಮತ್ತು ಮಂಗಳೂರು ಮತ್ತು ಮಹಾರಾಷ್ಟ್ರದ ಶೋಲಾಪುರದ ನಡುವೆ ಸಂಪರ್ಕ ಕಲ್ಪಿಸುವ 691 ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 169 ಇವು ಈ ನಗರವನ್ನು ಸಂಪರ್ಕಿಸುತ್ತವೆ. ನಗರದಿಂದ 15 ಕಿ.ಮೀ ದೂರ ಇರುವ ಕೆಂಜಾರು ಎಂಬ ಪ್ರದೇಶದಲ್ಲಿ ನೂತನವಾಗಿ ನಿರ್ಮಿಸಿದ ಮುಂಬಾಯಿ, ಬೆಂಗಳೂರು ಹಾಗೂ ಕೊಲ್ಲಿರಾಷ್ಟ್ರಗಳಿಗೆ ಸಂಪರ್ಕ ಕಲ್ಪಿಸುವ ಅಂತರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣವಿದೆ. ಇದಲ್ಲದೆ ಕೊಂಕಣ್ ರೈಲ್ವೆ ಸಹಿತ ಮಂಗಳೂರಿನಿಂದ ದೇಶದ ಹಲವು ಪ್ರಮುಖ ನಗರಗಳಿಗೆ ಸಂಪರ್ಕ ಕಲ್ಪಿಸುವ ರೈಲು ವ್ಯವಸ್ಥೆಯೂ ಇಲ್ಲಿದೆ. ಇದರೊಂದಿಗೆ ಕರಾವಳಿ ಪ್ರದೇಶದ ಪ್ರಮುಖ ಕೈಗಾರಿಕೆಗಳಿಗೆ ಆಧಾರಸ್ತಂಭವಾಗಿ ಆಧುನಿಕ ಸೌಲಭ್ಯಗಳನ್ನು ಹೊಂದಿದ ನವಮಂಗಳೂರು ಬಂದರು ಮಂಗಳೂರನ್ನು ಪ್ರಪಂಚದ ನಕ್ಷೆಯಲ್ಲಿ ಗುರುತಿಸುವಂತೆ ಮಾಡಿದೆ.

ಇತ್ತೀಚಿನ ವರ್ಷಗಳಿಂದ ಮಂಗಳೂರು ವಿಶೇಷ ವಿತ್ತ ವಲಯವೆಂದು ಗುರುತಿಸಿಕೊಂಡ ಕಾರಣದಿಂದ ಅಭಿವೃದ್ಧಿಯ ವೇಗ ಮತ್ತಷ್ಟು ಹೆಚ್ಚಾಗಿದೆ. ಶೈಕ್ಷಣಿಕ ಗುಣಮಟ್ಟ, ವ್ಯಾವಹಾರಿಕಾ ಚಾಕಚಕ್ಯತೆ ಹೆಚ್ಚುತ್ತಿದ್ದರೂ, ಆಧುನಿಕ ಮೂಲಸೌಕರ್ಯ, ವಿಸ್ತೃತ ಪ್ರಾದೇಶಿಕ ಅಭಿವೃದ್ಧಿ, ನಾಗರಿಕ ಸಮಾಜದ ಪೂರ್ಣ ಭಾಗಿತ್ವದ ಕೊರತೆ, ಇಲ್ಲಿನ ಸಮಸ್ಯಾತ್ಮಕ ವಿಚಾರಗಳಲ್ಲಿ ಒಳಗೊಂಡಿವೆ. ಬದಲಾಗುತ್ತಿರುವ ಪರಿಸರ ಪರಿಸ್ಥಿತಿಯ ಸಂದರ್ಭದಲ್ಲಿ ಇವುಗಳ ಕಡೆಗೆ ಸಂಶೋಧಕರೂ, ನೀತಿ ರೂಪಿಸುವವರು/ಆಡಳಿತಗಾರರೂ ತ್ವರಿತ ಗಮನಹರಿಸುವುದು ಅಗತ್ಯ (ಹನ್ಸ್ 2009).

ಪ್ರಸ್ತುತ ಅಧ್ಯಯನವನ್ನುಅನುಭವಾತ್ಮಕ ವಿಧಾನಗಳ ಆಧಾರದಲ್ಲಿ ನಡೆಸಲಾಗುವುದು. ಇದು ಅನುಭವಾತ್ಮಕ ವಿಧಾನಗಳ ಆಧಾರದ ಅಧ್ಯಯನವಾಗಿದ್ದರೂ ವಿಶೇಷಣೆಗೆ ಒಳಪಡಿಸುವ ಸಂದರ್ಭಗಳಲ್ಲಿ ಅದಕ್ಕೆ ಸಂಬಂಧಿಸಿದ ಸೈದ್ಧಾಂತಿಕ ಸಂಗತಿಗಳನ್ನು ಪರಿಗಣಿಸಲಾಗಿದೆ. ಪ್ರಾಥಮಿಕ ಮತ್ತು ಅನುಷಂಗಿಕ ಮೂಲಗಳಿಂದ ಸಂಗ್ರಹಿಸಿದ

ಪರಿಮಾಣಾತ್ಮಕ ಮತ್ತು ಗುಣಾತ್ಮಕ ಮಾಹಿತಿಯನ್ನು ವಿಶ್ಲೇಷಣೆ ಮಾಡಲು ಮೌಲ್ಯಮಾಪನ ಮಾದರಿಯನ್ನು ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಪ್ರಾಥಮಿಕ ಮಾಹಿತಿಯನ್ನು ಸಮೀಕ್ಷೆಗೆ ಆಯ್ಕೆ ಮಾಡಿಕೊಂಡ ಶಾಲೆಗಳಲ್ಲಿ ಪೋಷಕರು, ಶಿಕ್ಷಕರು, ವಿದ್ಯಾರ್ಥಿಗಳು, ಸಮಿತಿಗಳ ಸದಸ್ಯರುಗಳನ್ನು ನೇರ ಸಂದರ್ಶನ, ಚರ್ಚೆ ಮತ್ತು ಕ್ಷೇತ್ರ ಕಾರ್ಯಕ್ರಮದ ಟಿಪ್ಪಣಿಗಳಿಂದ ಸಂಗ್ರಹಿಸಲಾಗುವುದು.

ನಾಲ್ಕು ಆಯ್ದ ಶಾಲೆಗಳಿಂದ 20 ಶಿಕ್ಷಕರನ್ನು, 20 ಪೋಷಕರನ್ನು 20 ವಿದ್ಯಾರ್ಥಿಗಳನ್ನು ಸಂಧರ್ಶಿಸಿ ಮಾಹಿತಿಗಳನ್ನು ಸಂಗ್ರಹಿಸಲಾಗುವುದು. ಆಯ್ದ ನಾಲ್ಕು ಶಾಲೆಗಳ ಮುಖ್ಯೋಪಾಧ್ಯಾಯರನ್ನು ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಗುವುದು.

ಅನುಷಂಗಿಕ ಮಾಹಿತಿಯನ್ನು ಶಾಲೆಗಳ ದಾಖಲೆಗಳು, ಶಿಕ್ಷಣ ಇಲಾಖೆಯ ಪ್ರಕಟಣೆಗಳು, ಶಿಕ್ಷಣ ಆಯೋಗಗಳ ವರದಿಗಳು ಮತ್ತು ಇದುವರೆಗೂ ನಡೆದಿರುವ ಅಧ್ಯಯನಗಳ ಸಾಹಿತ್ಯಗಳಿಂದ ಪಡೆದುಕೊಳ್ಳಲಾಗುವುದು.

1.7 ಸಾಹಿತ್ಯ ವಿಮರ್ಶೆ

ಅಧ್ಯಯನಕ್ಕೆ ಸಂಬಂಧಪಟ್ಟ ವಿವಿಧ ಗ್ರಂಥಗಳನ್ನು, ಕೃತಿಗಳನ್ನು ಪತ್ರಿಕೆಗಳನ್ನು, ದಾಖಲೆಗಳನ್ನು, ವಿವಿಧ ಸಂಶೋಧನಾ ಅಧ್ಯಯನಗಳನ್ನು ಪರಿಶೀಲಿಸಲಾಗುವುದು.

1.8 ಅಧ್ಯಯನದ ಮಿತಿಗಳು

ಪ್ರಸ್ತುತ ಅಧ್ಯಯನಕ್ಕೆ ಕೆಲವು ಮಿತಿಗಳಿವೆ. ಅಧ್ಯಯನದಲ್ಲಿ ಅಂಕಿ ಅಂಶಗಳ ಮತ್ತು ಮಾಹಿತಿ ಸಂಗ್ರಹಣೆಯ ಮೂಲಕ ಫಲಿತಗಳನ್ನು ಕಂಡುಕೊಳ್ಳಬೇಕಾಗಿದೆ. ಹೀಗೆ ಮಾಡುವಾಗ ವಿವರಣಾತ್ಮಕ ವಿಶ್ಲೇಷಣೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಮಂಗಳೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಶಾಲೆಗಳಲ್ಲಿ ಅಧ್ಯಯನಕ್ಕೆ ಆರಿಸಿದ ಶಾಲೆಗಳಲ್ಲಿ ಲಭ್ಯವಿರುವ ಮಾಹಿತಿಗಳನ್ನು ಹೆಚ್ಚಾಗಿ ಅವಲಂಬಿಸಲಾಗಿದೆ. ಇದರಿಂದ ಕೆಲವು ಅಂಕಿ ಅಂಶಗಳ ಕೊರತೆಯು ಎದುರಾಗಬಹುದು. ಜೊತೆಗೆ ಅಧ್ಯಯನದ ವ್ಯಾಪ್ತಿ ಕೂಡ ಅಧ್ಯಯನದ ಮಿತಿಯಾಗಿದೆ.

1.9 ಅಧ್ಯಯನದ ರೂಪರೇಷೆಗಳು

ಈ ಸಂಪ್ರಬಂಧವನ್ನು ಹೀಗೆ ಆಯೋಜಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದ ಪ್ರಗತಿಗೆ ಸರಕಾರವು ಮಾಡಿರುವ ವಿವಿಧ ಯೋಜನೆಗಳನ್ನು ವಿವರಿಸಲಾಗಿದೆ. ಅಕ್ಷರ ದಾಸೋಹ ಯೋಜನೆಗೆ ಸಂಬಂಧಿಸಿದಂತೆ ಊಟದ ತಯಾರಿಕೆ ಮತ್ತು ವಿತರಣೆಗೆ ಸಂಬಂಧಿಸಿದಂತೆ ಸ್ಥಳೀಯವಾಗಿರುವ ಮೂಲ ಸೌಲಭ್ಯಗಳ ತೊಡಕುಗಳನ್ನು ಗುರುತಿಸುವುದು ಮತ್ತು . ಯೋಜನೆಯ ಅನುಷ್ಠಾನದಲ್ಲಿ ಹೊಸ ಸುಧಾರಣೆಗಳನ್ನು ಗುರುತಿಸುವುದು.

ಈ ಅಧ್ಯಾಯದ ಮುಂದಿನ ಭಾಗವು ಅಧ್ಯಯನದ ಸಮಸ್ಯೆಗಳು, ಉದ್ದೇಶಗಳು, ಊಹೆಗಳು, ಮಿತಿಗಳು ಮತ್ತು ಅಧ್ಯಯನದ ವಿಧಾನಗಳನ್ನು ಒಳಗೊಂಡಿದೆ.

ಎರಡನೆಯ ಅಧ್ಯಾಯದಲ್ಲಿ (ಅಧ್ಯಯನಕ್ಕೆ ಆಯ್ಕೆ ಮಾಡಿದ ಕರ್ನಾಟಕ ರಾಜ್ಯದ ಮಂಗಳೂರು ತಾಲೂಕಿನ) ಅಕ್ಷರ ದಾಸೋಹ ಯೋಜನೆಗಿಂತ ಮೊದಲು ಜಾರಿಯಲ್ಲಿದ್ದ ಆಹಾರ ಧಾನ್ಯ ವಿತರಣೆಯ ಸಾಧಕ–ಬಾಧಕಗಳು ಒಳಗೊಂಡಿವೆ.

ಮೂರನೇ ಅಧ್ಯಾಯದಲ್ಲಿ ಅಕ್ಷರ ದಾಸೋಹದ ಪರಿಣಾಮ, ಶಾಲಾ ದಾಖಲಾತಿ, ಮಕ್ಕಳ ಪೌಷ್ಠಿಕತತೆಯ ಕುರಿತು ವಿಶ್ಲೇಷಣೆ ಇರುತ್ತದೆ.

ನಾಲ್ಕನೇ ಅಧ್ಯಾಯದಲ್ಲಿ ಅಕ್ಷರ ದಾಸೋಹ ಯೋಜನೆಗೆ ಸಂಬಂಧಿಸಿದ ಅನುಕೂಲತೆಗಳು, ಮೂಲ ಸೌಲಭ್ಯಗಳ ಕೊರತೆ, ಸಮಸ್ಯೆಗಳು ಮತ್ತು ಪರಿಹಾರಗಳ ವಿಶ್ಲೇಷಣೆ ಇದೆ.

ಐದನೆಯ ಅಧ್ಯಾಯವು ಒಟ್ಟು ಸಂಶೋಧನೆಯ ಸಾರಾಂಶವನ್ನು ಹೇಳುತ್ತದೆ. ಈ ಭಾಗವು ಪ್ರಮುಖವಾಗಿ ಅಧ್ಯಯನದ ಶೋಧ ಹಾಗೂ ನಿರ್ಣಯಗಳನ್ನು ತಿಳಿಸುತ್ತದೆ. ಸಮಸ್ಯೆಗಳ ಪರಿಹಾರಕ್ಕೆ ಸಲಹೆ ಹಾಗೂ ಸೂಚನೆಗಳನ್ನು ನೀಡಲಾಗಿದೆ.

ಅಧ್ಯಾಯ – 2

ಅಕ್ಷರ ದಾಸೋಹ ಯೋಜನೆಗಿಂತ ಮೊದಲು ಜಾರಿಯಲ್ಲಿದ್ದ

ಆಹಾರ ಧಾನ್ಯ ವಿತರಣೆಯ ಸಾಧಕ–ಬಾಧಕಗಳು

ಅಧ್ಯಾಯ – 2

ಅಕ್ಷರ ದಾಸೋಹ ಯೋಜನೆಗಿಂತ ಮೊದಲು ಜಾರಿಯಲ್ಲಿದ್ದ ಆಹಾರ ಧಾನ್ಯ ವಿತರಣೆಯ ಸಾಧಕ–ಬಾಧಕಗಳು

ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕವಾಗಿ ವಿಸ್ತರಣೆ ಮಾಡುವ ಆಶಯದಿಂದ ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಅನೇಕ ಪ್ರೋತ್ಸಾಹಕ ಕಾರ್ಯಕ್ರಮಗಳನ್ನು ರೂಪಿಸಿ ಆಚರಣೆಗೆ ತಂದಿವೆ. ಅವುಗಳಲ್ಲಿ ಶಾಲಾ ಬಿಸಿಯೂಟ ಪ್ರಮುಖವಾದುದು. ಶಾಲಾ ಬಿಸಿಯೂಟ ಕಾರ್ಯಕ್ರಮವು ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಮತ್ತು ಮಕ್ಕಳ ಆರೋಗ್ಯದ ಮೇಲೆ ನೇರವಾದ ಪರಿಣಾಮ ಬೀರಿದೆ. ಬಿಸಿಯೂಟ ಜಾರಿಗೆ ಬರುವ ಮಧ್ಯಂತರ ಅವಧಿಯಲ್ಲಿ ಜಾರಿಯಲ್ಲಿದ್ದ ಬೇಯಿಸದೆ ಇರುವ ಮೂರು ಕೆ.ಜಿ. ಆಹಾರ ಧಾನ್ಯವನ್ನು(ಅಕ್ಕಿ ಅಥವಾ ಗೋಧಿ) ಶೇಕಡ 80 ಹಾಜರಾತಿ ಹೊಂದಿದ ಎಲ್ಲಾ ಮಕ್ಕಳಿಗೆ ಪ್ರತಿ ತಿಂಗಳು ನೀಡುವುದು ಜಾರಿಯಲ್ಲಿತ್ತು. ವಿಶೇಷವಾಗಿ ಹಿಂದುಳಿದ ಪ್ರದೇಶಗಳಲ್ಲಿ ಈ ಕಾರ್ಯಕ್ರಮ ಪ್ರತಿ ತಿಂಗಳಿಗೆ ಬದಲಾಗಿ ಮೂರು ತಿಂಗಳಿಗೆ ಒಂದು ಬಾರಿ ಆಹಾರ ಧಾನ್ಯದ ವಿತರಣೆಯಾಗುತ್ತಿದ್ದ ನಿದರ್ಶನಗಳಿವೆ. ಹೀಗಾಗಿ ಈ ಕಾರ್ಯಕ್ರಮವು ಶಾಲಾ ಹಾಜರಾತಿಯಲ್ಲಿ ಯಾವುದೇ ಪರಿಣಾಮವನ್ನು ಉಂಟು ಮಾಡಿಲ್ಲ ಎಂಬುದನ್ನು ಕೆಲವು ಅಧಿಕಾರಿಗಳು, ಶಿಕ್ಷಕರು, ಮತ್ತು ಪೋಷಕರು ಒಪ್ಪಿಕೊಳ್ಳುತ್ತಾರೆ. ಅಲ್ಲದೇ ಶಾಲಾ ಪ್ರೋತ್ಸಾಹಕ ಕಾರ್ಯಕ್ರಮದ ಮೂಲಕ ವಿತರಣೆಯಾಗುತ್ತಿದ್ದ ಆಹಾರಧಾನ್ಯ (ಅಕ್ಕಿ ಅಥವಾ ಗೋಧಿ) ಕೂಡ ಅತ್ಯಂತ ಕಡಿಮೆ ಗುಣಮಟ್ಟದಾಗಿತ್ತು, ರಾಜಸ್ತಾನದ ಕೆಲವು ಪ್ರದೇಶಗಳಲ್ಲಿ ಆಹಾರ ಧನ್ಯವು ಫಲಾನುಭವಿಗಳಿಗೆ (ಶಾಲಾ ಮಕ್ಕಳಿಗೆ) ದೊರಕದೆ ಕಳ್ಳಸಂತೆಯಲ್ಲಿ ಮಾರಾಟವಾಗಿರುವುದು ಇದೆ. ಇದಕ್ಕೆ ಪೂರಕವಾಗಿ ಅಮರ್ತ್ಯಸೇನ್ ಅವರ ಮಾರ್ಗದರ್ಶನದ 'ಪ್ರತೀಚಿ ಎಜುಕೇಶನ್ ರಿಪೋರ್ಟ್' ಎಂಬ ವರದಿಯಲ್ಲಿ ಅಧ್ಯಯನಕ್ಕೆ ಒಳಪಡಿಸಿದ ಶೇಕಡ 78 ಪೋಷಕರು ಅಹಾರ ಧಾನ್ಯ ವಿತರಣೆಗೆ ಬದಲಿಯಾಗಿ, ಶಾಲಾ ಮಧ್ಯಾಹ್ನದ ಊಟ ಕಾರ್ಯಕ್ರಮವನ್ನು ಸಮಂಜಸವಾಗಿ ಆಚರಣೆಗೆ ತರಬೇಕು ಎಂಬ ದೃಷ್ಟಿ ಹೊಂದಿರುವುದನ್ನು ಗುರುತಿಸಿದೆ.

ಇದಲ್ಲದೇ, ಪ್ರತೀ ತಿಂಗಳೂ ಶೇಕಡ 80ರಷ್ಟು ಶಾಲಾ ಹಾಜರಾತಿಯನ್ನು ಹೊಂದಿದ ಮಕ್ಕಳಿಗೆ ಆಹಾರಧಾನ್ಯ ನೀಡುವ ಕಾರ್ಯಕ್ರಮವು ಸಂಪೂರ್ಣವಾಗಿ ಜಾರಿಗೊಳ್ಳುವಲ್ಲಿ ವಿಫಲವಾಗಿದೆ. ಕೆಲವು ಪ್ರದೇಶಗಳಲ್ಲಿ ಪ್ರತಿ ತಿಂಗಳು

ನೀಡಬೇಕಾದ ಶಾಲಾ ಆಹಾರ ಧಾನ್ಯ ಕಾರ್ಯಕ್ರಮವು ಮೂರು ತಿಂಗಳಿಗೆ ಒಂದು ಸಲ ವಿತರಿಸುವ ನಿದರ್ಶನಗಳಿವೆ. ಇಂತಹ ಅನೇಕ ಸಮಸ್ಯೆಗಳಿಂದ ಈ ಕಾರ್ಯಕ್ರಮವು ಪ್ರತಿನಿತ್ಯದ ಶಾಲಾ ಹಾಜರಾತಿಯನ್ನು ಪರಿಣಾಮಕಾರಿಯಾಗಿ ಉತ್ತೇಜಿಸಲಿಲ್ಲ. ಅದೂ ಅಲ್ಲದೇ, ವಾಸ್ತವಿಕವಾಗಿ ಆಹಾರ ಧಾನ್ಯವು ಹಂಚಿಕೆಯಾಗಿರುವಲ್ಲಿ ಈ ಕಾರ್ಯಕ್ರಮವು ಕೊನೆಗೊಳ್ಳುವುದು ಬಹಳ ವಿಸ್ತೃತವಾದ ಸರಪಣಿ ಮಾದರಿ ವಿಳಂಬ ನೀತಿ ಹಾಗೂ ಲಂಚಗುಳಿತನದಿಂದ. ಅದೇನೇ ಇದ್ದರೂ, ಈ ಕಾರ್ಯಕ್ರಮಕ್ಕೆ ಸಾಮಾನ್ಯವಾದ ಅಂಕಿತ ನಾಮವಿದೆ. ಅದೇನಂದರೆ "ಪ್ರತಿ ಮಗುವು ಪ್ರತಿ ತಿಂಗಳು ಮೂರು ಕೆ.ಜಿ. ಆಹಾರ ಧಾನ್ಯಕ್ಕೆ ಮೂರು ಕಿಲೋಮೀಟರ್ ಹೋಗಬೇಕು." ಕೆಲವು ಸಂದರ್ಭಗಳಲ್ಲಿ ಮೂರು ನಾಲ್ಕು ದಿನಗಳು ವ್ಯರ್ಥವಾಗಿ ಹೋಗಿ ಬರಬೇಕು ಎಂದು ಅನೇಕ ಪೋಷಕರುದೂರುವುದಲ್ಲದೆ, ಹೋಗಿ ಬರುವ ಶ್ರಮಕ್ಕಿಂತ ಕಡಿಮೆ ಪ್ರಮಾಣದ ಆಹಾರ ಧಾನ್ಯವನ್ನು ನಮ್ಮ ಮಕ್ಕಳು ಪಡೆಯುತ್ತಾರೆ ಎಂದು ಆರೋಪ ಮಾಡುತ್ತಾರೆ. ಇಂತಹ ಆರೋಪಗಳು ಅತ್ಯಂತ ಹಿಂದುಳಿದ ಪ್ರದೇಶಗಳ ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ ಕಂಡುಬರುತ್ತಿವೆ.

ಬಿಸಿಯೂಟ ಜಾರಿ ಬರುವುದಕ್ಕೆ ಮೊದಲು ಪ್ರತಿ ತಿಂಗಳು ಶೇಕಡ 80ರಷ್ಟು ಹಾಜರಾತಿಯನ್ನು ಹೊಂದಿದ ಮಕ್ಕಳು ಮಾತ್ರ ಆಹಾರ ಧಾನ್ಯ ಪಡೆಯಲು ಅರ್ಹರಾಗಿದ್ದರು. ಆದರೆ ಈ ಕಾರ್ಯಕ್ರಮದ ವಾಸ್ತವಿಕ ಆಚರಣೆಯಲ್ಲಿ ಶಿಕ್ಷಕರು ಶಾಲೆಗೆ ದಾಖಲಾದ ಎಲ್ಲಾ ಮಕ್ಕಳಿಗೆ ಆಹಾರ ಧಾನ್ಯಗಳನ್ನು ವಿತರಿಸುತ್ತಿದ್ದರು. ಏಕೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಬಹಳ ಸುಲಭ. ಶೈಕ್ಷಣಿಕ ಇಲಾಖೆಯ ಔಪಚಾರಿಕ ಆಯ್ಕೆಯ ಕ್ರಮ ಅಥವಾ ಒರೆಗಲ್ಲು, ಅನೇಕ ಸ್ಥಳಗಳಲ್ಲಿ ಸಾಮಾಜಿಕವಾಗಿ ಒಪ್ಪಿತವಾಗಿಲ್ಲ. ಶಾಲೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹಾಜರಾಗದ ಮಕ್ಕಳನ್ನು ಸೌಲಭ್ಯದಿಂದ ತೆಗೆಯಲು ಶಿಕ್ಷಕರು ಪ್ರಯತ್ನ ನಡೆಸಿರುವ ಸ್ಥಳಗಳಲ್ಲಿ ಅಥವಾ ಶಾಲೆಗಳಲ್ಲಿ ಪೋಷಕರುಗಳು ಕನಿಷ್ಠಮಟ್ಟದ ಸೌಜನ್ಯವನ್ನು ಶಿಕ್ಷಕರ ಬಗ್ಗೆ ತೋರಿಸದೆ ಜಗಳವಾಡಿರುವುದು ಇದೆ.

ಆಹಾರ ಧಾನ್ಯ ವಿತರಣಾ ಕಾರ್ಯಕ್ರಮವು ನಿರೀಕ್ಷಿತ ಮಟ್ಟದಲ್ಲಿ ಶಾಲಾ ಹಾಜರಾತಿಯನ್ನು ಹೆಚ್ಚಿಸಲಿಲ್ಲ. ಇತರ ಶಾಲಾ ಪ್ರೋತ್ಸಾಹದಾಯಕ ಕಾರ್ಯಕ್ರಮಗಳಂತೆ ಈ ಕಾರ್ಯಕ್ರಮವು ಕೂಡ ಕೆಲವು ದೋಷಗಳಿಂದ ಕೂಡಿದೆ. ಆಹಾರ ಧಾನ್ಯ ವಿತರಣೆಯ ಫಲವಾಗಿ ಶಾಲೆಗಳಿಗೆ ಮಕ್ಕಳ ದಾಖಲಾತಿ ಹೆಚ್ಚಾಯಿತೇ ಹೊರತು ಶಾಲಾ ಹಾಜರಾತಿಯಲ್ಲಿ ಪ್ರಗತಿ ಕಾಣಲಿಲ್ಲ. ಹೀಗಾಗಿ, ಆಹಾರ ಧಾನ್ಯ ವಿತರಣಾ ಕಾರ್ಯಕ್ರಮದ ಪರಿಣಾಮವು ದಾಖಲಾತಿಯ ಮೇಲೆ ಹೆಚ್ಚಿನ ಪ್ರಭಾವ

ಬೀರಿತು. ಶಾಲಾ ಹಾಜರಾತಿಯಲ್ಲಿ ಬಹಳ ಕಡಿಮೆ ಪ್ರಭಾವ ಬೀರಿತು. ಪೌಷ್ಠಿಕತೆ ಹಿನ್ನೆಲೆಯಲ್ಲಿ ಬೇಯಿಸದಿರುವ ಆಹಾರ ಧಾನ್ಯ ವಿತರಣಾ ಕಾರ್ಯಕ್ರಮವು ನಿಷ್ಪ್ರಯೋಜಕವಾಗಿತ್ತು.

ಆಹಾರಧಾನ್ಯ ವಿತರಣಾ ಕಾರ್ಯಕ್ರಮವನ್ನು ಕ್ರಮಬದ್ಧವಾಗಿ ಆಚರಣೆಗೆ ತರುವಾಗ ಮತ್ತು ನಿರ್ವಹಣೆ ಮಾಡುವಾಗ ಅನೇಕ ಲೋಪದೋಷಗಳು ಕಂಡುಬಂದಿವೆ. ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಕಡುಬಡತನದ ಕುಟುಂಬಗಳಿಂದ ಬಂದ ಶಾಲಾ ಮಕ್ಕಳಿಗೆ ಪ್ರೋತ್ಸಾಹ ನೀಡುವುದಾಗಿದೆ. ಈ ಕಾರ್ಯಕ್ರಮದ ಜಾರಿಯಲ್ಲಿ ರಾಜ್ಯ ಸರ್ಕಾರಗಳು ಸಂಪನ್ಮೂಲಗಳನ್ನು ಸಾಕಾಗುವಷ್ಟು ನೀಡದೆ ಇರುವುದು, ಅವಶ್ಯಕ ಸೌಲಭ್ಯಗಳನ್ನು ಸಮಯಕ್ಕೆ ಸರಿಯಾಗಿ ಒದಗಿಸದಿರುವುದು, ಆಹಾರ ಧಾನ್ಯ ವಿತರಣೆಯಲ್ಲಿ ತೊಂದರೆ ಮತ್ತು ತೊಡಕುಗಳು ಉಂಟಾಗಿರುವುದು ಕಂಡುಬಂದವು. ಹಾಗಾಗಿಯೇ ಶಾಲಾ ಬಿಸಿಯೂಟ ಕಾರ್ಯಕ್ರಮವು ತಳಸಮುದಾಯಗಳಿಂದ ಹಾಗೂ ಕಡು ಬಡತನದ ಕುಟುಂಬಗಳಿಂದ ಬಂದ ಮಕ್ಕಳ ಶಾಲಾ ಹಾಜರಾತಿ ಹೆಚ್ಚಿಸುವಲ್ಲಿ ಮತ್ತು ಪ್ರಾಥಮಿಕ ಶಿಕ್ಷಣದ ಬೆಳವಣಿಗೆಯಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ತರಬಲ್ಲ ಅಂಶವಾಗಿದೆ ಎಂದು ಸುಪ್ರೀಂಕೋರ್ಟ್ 28–11–2001ರಂದು ತನ್ನ ಮಧ್ಯಂತರ ಆದೇಶ ನೀಡಿದೆ.

ಇದನ್ನು ಸೂಕ್ಷ್ಮವಾಗಿ ಗಮನಿಸಿ ಪರಿಶೀಲಿಸಿದ ಶಿಕ್ಷಣ ಇಲಾಖೆಯು 15–8–1995ರಲ್ಲಿ ಜಾರಿಗೆ ಬಂದ ಆಹಾರ ಧಾನ್ಯ ವಿತರಣೆಯ ಸಾಧಕ–ಬಾಧಕಗಳನ್ನು ಕೂಲಂಕಷವಾಗಿ ಚರ್ಚಿಸಿ, ಕೇಂದ್ರ ಸರ್ಕಾರದ ಆದೇಶಗಳನ್ನು ಪರಿಗಣಿಸಿತು. ಇದಕ್ಕೆ ಪೂರಕವಾಗಿ ಕರ್ನಾಟಕ ರಾಜ್ಯ ಸರ್ಕಾರವು ನೇಮಿಸಿದ ಶಿಕ್ಷಣ ಕಾರ್ಯಪಡೆಯು ಸಲ್ಲಿಸಿದ ವರದಿಯಲ್ಲಿ ಈಗಿನ ಪದ್ಧತಿಯಂತೆ ಆಹಾರಧಾನ್ಯ ವಿತರಣೆಯ ತೊಡಕುಗಳನ್ನು ಪರಿಶೀಲಿಸಿ ವಾಸ್ತವಿಕವಾಗಿ ಫಲಾನುಭವಿಗಳಾದ ಮಕ್ಕಳಿಗೆ ಆಹಾರ ಧಾನ್ಯ ವಿತರಣೆಯಿಂದ ಹೆಚ್ಚಿನ ಅನುಕೂಲಗಳು ಸಿಗುತ್ತಿಲ್ಲ. ಇದರ ಬದಲಿಗೆ ಸಿದ್ಧಪಡಿಸಿದ ಮಧ್ಯಾಹ್ನ ಉಪಹಾರವನ್ನು ಸ್ಥಳೀಯ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಮೂಲಕ ಶಾಲಾ ಮಕ್ಕಳಿಗೆ ಪ್ರತಿ ದಿನ ಆ ಶಾಲೆ ನಡೆಯುವ ಸಮಯಗಳಲ್ಲಿ ಒದಗಿಸುವಂತೆ ಶಿಫಾರಸ್ಸು ಮಾಡಿತ್ತು.

ಈ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಸರ್ಕಾರವು ಕೂಡ ರಾಜ್ಯದ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪ್ರೋತ್ಸಾಹಕ ಕಾರ್ಯಕ್ರಮವಾಗಿ ಶಾಲಾ ಬಿಸಿಯೂಟವನ್ನು ಅಳವಡಿಸಿಕೊಳ್ಳಲು ನಿರ್ಧರಿಸಿತು. ಬಿಸಿಯೂಟ ಕಾರ್ಯಕ್ರಮ ಜಾರಿಯಾದ ನಂತರ ಶಾಲಾ ಹಾಜರಾತಿಯಲ್ಲಿ ಸುಧಾರಣೆಯಾಗಿದೆ ಎಂಬ ವಾದವನ್ನು ಮುಂದಿಟ್ಟು ಇದು

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪೂರಕವಾಗಿದೆ ಎಂದು ಪರಿಗಣಿಸಿದ ರಾಜ್ಯ ಸರ್ಕಾರವು 2003–04ರ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ಸರಕಾರಿ ಪ್ರಾಥಮಿಕ ಶಲೆಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತಂದಿದೆ.

ಅಧ್ಯಾಯ – 3

ಅಕ್ಷರ ದಾಸೋಹದ ಪರಿಣಾಮ, ಶಾಲಾ ದಾಖಲಾತಿ,ಹಾಜರಾತಿ ಮತ್ತು ಮಕ್ಕಳ ಪೌಷ್ಠಿಕತತೆಯ ಕುರಿತು ವಿಶ್ಲೇಷಣೆ

ಅಧ್ಯಾಯ – 3

ಅಕ್ಷರ ದಾಸೋಹದ ಪರಿಣಾಮ, ಶಾಲಾ ದಾಖಲಾತಿ,ಹಾಜರಾತಿ ಮತ್ತು ಮಕ್ಕಳ ಪೌಷ್ಠಿಕತತೆಯ ಕುರಿತು ವಿಶ್ಲೇಷಣೆ

ಶಾಲಾ ಬಿಸಿಯೂಟ ಕಾರ್ಯಕ್ರಮವು ಮೂರು ಪ್ರಮುಖ ನಿರ್ಣಾಯಕ ಉದ್ದೇಶಗಳನ್ನು ಹೊಂದಿದೆ: ಪ್ರಾಥಮಿಕ ಶಿಕ್ಷಣದ ಬೆಳವಣಿಗೆ: ಮಕ್ಕಳಲ್ಲಿ ಪೌಷ್ಠಿಕತೆ ಹೆಚ್ಚಳ ಮತ್ತು ಸಾಮಾಜಿಕ ಸಮಾನತೆ ಈಉದ್ದೇಶಗಳು ಪ್ರಾಥಮಿಕ ಶಿಕ್ಷಣದ ಒಟ್ಟಾರೆ ಅಭಿವೃದ್ಧಿಗೆ ಬೇರೆ ಬೇರೆ ಅಂಶಗಳನ್ನು ರೂಪಿಸುವ ಮಹತ್ವಾಕಾಂಕ್ಷೆಗಳನ್ನು ಒಳಗೊಂಡಿದೆ. ಶಾಲಾ ಊಟದ ವ್ಯವಸ್ಥೆಯನ್ನು ಜಾರಿಗೊಳಿಸುವ ಮೂಲ ಉದ್ದೇಶವೆಂದರೆ, ಇದು ಶಾಲಾ ದಾಖಲಾತಿಯನ್ನು ಮತ್ತು ಹಾಜರಾತಿಯನ್ನು ಉತ್ತಮಗೊಳಿಸಲು ಸಹಕಾರಿಯಾಗಿದೆ. ಇದಕ್ಕಿಂತ ಹೆಚ್ಚಾಗಿ ಶಾಲಾ ಬಿಸಿಯೂಟ ವ್ಯವಸ್ಥೆಯು ನಿರ್ದಿಷ್ಟವಾಗಿ ಪ್ರತಿ ದಿನದ ಆಧಾರದಲ್ಲಿ ಶಾಲಾ ಹಾಜರಾತಿಯನ್ನು ಪರಿಣಾಮಕಾರಿಯಾಗಿ ಅಭಿವೃದ್ಧಿಪಡಿಸುವ ಮತ್ತೊಂದು ಗುಣಲಕ್ಷಣವನ್ನು ಹೊಂದಿದೆ. ಶಾಲಾ ಬಿಸಿಯೂಟವು ಮಕ್ಕಳ ಹಸಿವನ್ನು ಕಡಿಮೆಗೊಳಿಸುವ ಮೂಲಕ ಮಕ್ಕಳಲ್ಲಿ ಕಲಿಕೆಯ ಬಗ್ಗೆ ಏಕಾಗ್ರತೆ ಹೆಚ್ಚಿಸುವ ಜೊತೆ ಜೊತೆಗೆ ಮಕ್ಕಳಲ್ಲಿ ಕಲಿಕೆಯ ಕುಶಲತೆಯನ್ನು ಹೆಚ್ಚಿಸುವ ಸಾಧ್ಯತೆ ಇದೆ. ಉತ್ತಮವಾಗಿ ಸಂಘಟಿತವಾದ ಶಾಲಾ ಬಿಸಿಯೂಟ ಕಾರ್ಯಕ್ರಮವು ಪ್ರತಿ ದಿನದ ಮಾಮೂಲಿ ಕಲಿಕಾ ಪ್ರಕ್ರಿಯೆಗಿಂತ ಸ್ವಲ್ಪ ಭಿನ್ನವಾದ ಸಹಜ ಶೈಕ್ಷಣಿಕ ಮೌಲ್ಯಗಳನ್ನು ಮಕ್ಕಳಿಗೆ ಕಲಿಸುವ ಶಕ್ತಿಯನ್ನು ಕೂಡ ಹೊಂದಿದೆ. ಉದಾಹರಣೆಗೆ ಶಾಲಾ ಬಿಸಿಯೂಟವು ಮಕ್ಕಳಲ್ಲಿ ಅನೇಕ ಉತ್ತಮ ಅಭ್ಯಾಸಗಳು ಮೂಡುವಂತೆ ಮಾಡಬಹುದು (ಊಟಕ್ಕೆ ಮೊದಲು ನಂತರ ಕೈ ತೊಳೆಯುವುದು, ಸ್ವಚ್ಛತೆ ಕಾಪಾಡುವುದು ಇತ್ಯಾದಿ). ಶುದ್ಧ ನೀರು ಕುಡಿಯುವ ಬಗ್ಗೆ, ಸಮತೋಲನ ಆಹಾರವನ್ನು ತೆಗೆದುಕೊಳ್ಳುವ ಬಗ್ಗೆ, ಇನ್ನೂ ಮುಂತಾದ ವಿಷಯಗಳ ಪ್ರಾಮುಖ್ಯತೆಯನ್ನು ತಿಳಿಸಬಹುದು.

ಶಾಲಾ ಬಿಸಿಯೂಟ ಯೋಜನೆಯ ನ್ಯೂಟ್ರೀಶನ್ ಉದ್ದೇಶವು ಸ್ವಲ್ಪ ಮಟ್ಟಿಗೆ ಮಕ್ಕಳ ಹಸಿವನ್ನು ತಡೆಗಟ್ಟುವುದರ ಮೂಲಕ ಮಕ್ಕಳ ಆರೋಗ್ಯಕರ ಬೆಳವಣಿಗೆಗೆ ಸಹಕಾರಿಯಾಗಿದೆ. ವಿಶೇಷವಾಗಿ ಮಕ್ಕಳ ಪೌಷ್ಠಿಕ ಬಲವರ್ಧನೆಯ ಕನಸನ್ನೂ ಇದು ಹೊಂದಿದೆ. ಪ್ರತಿ ದಿನ ಮಕ್ಕಳು ಸ್ವ ಇಚ್ಛೆಯಿಂದ ಶಾಲೆಗೆ ಬರುತ್ತಾರೆ. ಮತ್ತು ಶಾಲೆಯಲ್ಲಿ ನೀಡುವ ಎಲ್ಲಾ ಆಹಾರವನ್ನು ಅವರು ತಿನ್ನುತ್ತಾರೆ. ಇದು ಮಕ್ಕಳು ಆಹಾರವನ್ನು ಹೆಚ್ಚಾಗಿ ತೆಗೆದುಕೊಳ್ಳುವುದರ ಮೂಲಕ ಕ್ಯಾಲೋರಿಸ್ ಮತ್ತು ಪ್ರೋಟೀನ್ಸ್ ಹೆಚ್ಚಳದ ಜೊತೆಗೆ ಪೌಷ್ಠಿಕತೆಗೆ ಪೂರಕವಾಗುವ ಕಬ್ಬಿಣಾಂಶಗಳು ಮತ್ತು ಲವಣಾಂಶಗಳನ್ನು

ಸಮಪ್ರಮಾಣದಲ್ಲಿ ಸೇವಿಸುವುದರಿಂದ ಇದು ದೀರ್ಘಾವಧಿಯಲ್ಲಿ ಮಕ್ಕಳ ಬೆಳವಣಿಗೆಗೆ ಬಹಳ ಪ್ರಯೋಜನಕಾರಿಯಾಗಿದೆ. ಅಲ್ಲದೇ ಮಕ್ಕಳ ಪೌಷ್ಠಿಕತೆಯನ್ನು ಹೆಚ್ಚಳ ಮಾಡುವ ಉದ್ದೇಶಕ್ಕಾಗಿಯೇ ರೂಪಿಸಬೇಕಾದ ಕಾರ್ಯಕ್ರಮಗಳನ್ನು ಕಡಿಮೆಗೊಳಿಸುತ್ತದೆ.

ಶಾಲಾ ಬಿಸಿಯೂಟದ ಸಾಮಾಜೀಕರಣ ಉದ್ದೇಶ ಬಹಳ ಸರಳ ಮಟ್ಟದ್ದು. ಅಜಿದರೆ ವರ್ಗ, ಜಾತಿ ಮತ್ತು ಧರ್ಮ ಇತ್ಯಾದಿಗಳ ನಡುವೆ ಸಾಂಪ್ರದಾಯಿಕವಾಗಿ ನಿಷಿದ್ಧ ರೂಪದಲ್ಲಿ ಇರುವ ತಾರತಮ್ಯವನ್ನು ತೊಡೆದು ಎಲ್ಲಾ ಮಕ್ಕಳು ಒಟ್ಟಿಗೆ ಆಹಾರವನ್ನು ಸೇವಿಸುತ್ತಾರೆ. ಸಾಮಾಜಿಕ ಸಮಾನತೆಯನ್ನು ಸಾಧಿಸುವಲ್ಲಿಯೂ ಮಧ್ಯಾಹ್ನದ ಶಾಲಾ ಬಿಸಿಯೂಟ ಬಹಳ ಮಹತ್ವದ್ದಾಗಿದೆ.

ಅಧ್ಯಾಯ – 4

ಅಕ್ಷರ ದಾಸೋಹ ಯೋಜನೆಗೆ ಸಂಬಂಧಿಸಿದ ಅನುಕೂಲತೆಗಳು, ಮೂಲ ಸೌಲಭ್ಯಗಳ ಕೊರತೆ, ಸಮಸ್ಯೆಗಳು ಮತ್ತು ಪರಿಹಾರಗಳು

ಅಧ್ಯಾಯ – 4

ಅಕ್ಷರ ದಾಸೋಹ ಯೋಜನೆಗೆ ಸಂಬಂಧಿಸಿದ ಅನುಕೂಲತೆಗಳು, ಮೂಲ ಸೌಲಭ್ಯಗಳ ಕೊರತೆ, ಸಮಸ್ಯೆಗಳು ಮತ್ತು ಪರಿಹಾರಗಳು

4.1 ಪೀಠಿಕೆ

ಮಂಗಳೂರು ತಾಲ್ಲೂಕಿನ ಆಯ್ದ ಗ್ರಾಮೀಣ ಪ್ರದೇಶದ ಎರಡು ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಪೊಂಪೈ ಹಿರಿಯ ಪ್ರಾಥಮಿಕ ಶಾಲೆ ತಾಳಿಪಾಡಿ ಮತ್ತು ಪೊಂಪೈ ಜೂನಿಯರ್ ಕಾಲೇಜು ತಾಳಿಪಾಡಿ, ಐಕಳ ಹಾಗೂ ನಗರ ಪ್ರದೇಶದ ಎರಡು ಪ್ರಾಥಮಿಕ ಮತ್ತು ಪ್ರೌಢಶಾಲೆಗಳಾದ ಸೈಂಟ್ ಫ್ರಾನ್ಸಿಸ್ ಕ್ಸೇವಿಯರ್ಸ್ಕೂಲ್ ಫರಾರ್ ಮತ್ತು ಸರ್ಕಾರಿ ಪ್ರೌಢಶಾಲೆ ಮುತ್ತೂರು ಇಲ್ಲಿ ಸಂದರ್ಶನ ನಡೆಸಿ ಅಕ್ಷರ ದಾಸೋಹ ಯೋಜನೆಯ ಅನುಕೂಲತೆಗಳು, ಅನನುಕೂಲತೆಗಳು ಮತ್ತು ಪರಿಹಾರಗಳನ್ನು ವಿಶ್ಲೇಷಿಸುವ ಉದ್ದೇಶವನ್ನಿಟ್ಟುಕೊಂಡು ಈ ಅಧ್ಯಯನವನ್ನು ಮಾಡಲಾಗಿದೆ.

4.2 ಮೂಲಸೌಲಭ್ಯಗಳ ಕೊರತೆ, ಸಮಸ್ಯೆಗಳ ಕುರಿತು ಅನುಷಂಗಿಕ ಮಾಹಿತಿ

ಗ್ರಾಮಾಂತರ ಪ್ರದೇಶಗಳಲ್ಲಿ ಬಿಸಿಯೂಟ ಕಾರ್ಯಕ್ರಮ ಹೆಚ್ಚು ಸುಗಮವಾಗಲು ಬೇಕಾದ ಮೂಲ ಸೌಲಭ್ಯಗಳ ಸಮಸ್ಯೆ ಮತ್ತು ಕೊರತೆಗಳಿವೆ.

ಅಡುಗೆ ಮನೆ: ಸಿ.ಇ.ಎಸ್. ಅಧ್ಯಯನ ನಡೆಸಿದ ಮೂರು ರಾಜ್ಯಗಳಲ್ಲಿ ಬಹಳಷ್ಟು ಪ್ರಮಾಣದ ಶಾಲೆಗಳಲ್ಲಿ ವ್ಯವಸ್ಥಿತವಾದ ಅಡುಗೆ ಮನೆ ಸೌಲಭ್ಯಗಳು ಇಲ್ಲವಾಗಿದೆ. ಆಹಾರವನ್ನು ಯಾವುದೇ ಮೇಲ್ಛಾವಣಿ ಇಲ್ಲದ ತೆರೆದ ಸ್ಥಳಗಳಲ್ಲಿ ಮಾಡುತ್ತಿದ್ದಾರೆ. ಕೆಲವು ಶಾಲೆಗಳಲ್ಲಿ ತಾತ್ಕಾಲಿಕವಾಗಿ ನಿರ್ಮಾಣ ಮಾಡಿದ ಶೆಡ್ಡಳಿವೆ. ಇಂತಹ ಶಾಲೆಗಳಲ್ಲಿ ಮಳೆ, ಗಾಳಿ ಬಂದಾಗ ಆಹಾರವನ್ನು ಶಾಲೆಯ ಜಗುಲಿ ಅಥವಾ ತರಗತಿಗಳ ಒಳಗೆ ತಯಾರಿಸಲಾಗುತ್ತಿದೆ. ಅಲ್ಲದೇ ತೆರೆದ ಸ್ಥಳದಲ್ಲಿ ಅಡುಗೆ ಮಾಡುವುದರಿಂದ ಮಕ್ಕಳ ಕಲಿಕಾ ಏಕಾಗ್ರತೆಯು ಬೇರೆ ಕಡೆಗೆ ಸೆಳೆಯುವ ಸಾಧ್ಯತೆ ಹೆಚ್ಚು. ಅದರಲ್ಲಿಯೂ ಆಹಾರ ತಯಾರಿಕೆಯ ಉದ್ದೇಶಕ್ಕೆ ಶಾಲೆಯ ಜಗುಲಿ ಮತ್ತು ತರಗತಿಗಳ ಕೊಠಡಿಗಳನ್ನು ಆಗಿಂದಾಗ್ಗೆ ಬಳಸಿಕೊಳ್ಳುವುದರಿಂದ ಬೋಧನೆ ಮತ್ತು ಕಲಿಕೆಗೆ ಬಹಳಷ್ಟು ತೊಂದರೆಯಾಗುತ್ತದೆ. ಇದಲ್ಲದೆ ಅಡಿಗೆ ಮನೆ

ಕೊರತೆಯು ಆಹಾರದ ತಯಾರಿಕೆಗೆ ಬೇಕಾಗುವ ಸಾಮಗ್ರಿ ಮತ್ತು ಆಹಾರ ಪದಾರ್ಥಗಳ ಸಂಗ್ರಹಕ್ಕೆ ಬಹಳ ತೊಂದರೆಯಾಗಿದೆ.

ಅಡುಗೆ ಅನಿಲ : ಬಿಸಿಯೂಟ ಯೋಜನೆಯಲ್ಲಿ ಅಡಿಗೆ ಅನಿಲ ಮತ್ತು ಉರುವಲು ಮತ್ತೊಂದು ಪ್ರಮುಖ ಅಂಶವಾಗಿದೆ. ಕರ್ನಾಟಕದಲ್ಲಿ ಎಲ್..ಪಿ.ಜಿ. ಸಿಲಿಂಡರ್ ಮತ್ತು ಅದಕ್ಕೆ ಪೂರಕವಾದ ಒಲೆಯನ್ನು ಶಾಲೆಗಳಿಗೆ ಈಗಾಗಲೇ ಪೂರೈಸಲಾಗಿದೆ. ಆದರೆ ಬಹುತೇಕ ಶಾಲೆಗಳಲ್ಲಿ ಎಲ್.ಪಿ.ಜಿ. ಬಳಸಿ ಊಟವನ್ನು ತಯಾರಿಸಲಾಗುತ್ತಿಲ್ಲ. ಏಕೆಂದರೆ ಎಲ್.ಪಿ.ಜಿ. ಒಂದು ಸಿಲಿಂಡರ್ 10 ದಿನದ ಒಳಗೆ ಸಂಪೂರ್ಣವಾಗಿ ಖಾಲಿಯಾಉತ್ತದೆ. ಖಾಲಿಯಾದ ಬಳಿಕ ನಿಗದಿಪಡಿಸಿದ ಎಲ್.ಪಿ.ಜಿ ವತರಕರ ಬಳಿ ಹೋಗಿ ಬದಲಾಯಿಸಿಕೊಂಡು ಬರಬೇಕು. ವಿತರಕರ ಬಳಿ ಹೋದಾಗ ಅನಿಲ ತುಂಬಿದ ಸಿಲಿಂಡರ್‌ಗಳು ಇಲ್ಲವಾದರೆ ಬಹಳ ತೊಂದರೆಯಾಗುತ್ತದೆ. ಇದಕ್ಕಾಗಿ ಮಾಡುವ ವೆಚ್ಚ, ಸಮಯ ಇತ್ಯಾದಿ ಅಂಶಗಳನ್ನು ಲೆಕ್ಕಾಚಾರ ಮಾಡಿದರೆ, ಎಲ್. ಪಿ.ಜಿ. ಬಳಕೆ ಹೆಚ್ಚು ವೆಚ್ಚದಾಯಕವಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಇರುವ ಮತ್ತೊಂದು ಸಮಸ್ಯೆ, ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆ ಸರಿಯಾಗಿ ಇಲ್ಲದ ಗ್ರಾಮಗಳ ಶಾಲೆಗಳಿಗೆ ಎಲ್.ಪಿ.ಜಿ ಸಿಲಿಂಡರ್‌ಗಳು ಸರಿಯಾದ ಸಮಯಕ್ಕೆ ವಿತರಣೆಯಾಗದಿರುವುದು.

ನೀರು : ಬಿಸಿಯೂಟ ಕಾರ್ಯಕ್ರಮ ಹೆಚ್ಚು ಪರಿಣಾಮಕಾರಿಯಾಗಲು ನೀರು ಪ್ರಮುಖವಾದ ಅಂಶ. ಆಹಾರ ತಯಾರಿಕೆಗೆ ಶುದ್ಧ ನೀರು ಎಷ್ಟು ಪ್ರಮುಖವೋ, ಕುಡಿಯುವ ನೀರು ಕೂಡ ಅಷ್ಟೇ ಪ್ರಮುಖವಾದದ್ದು.ಆಹಾರದ ಸೇವನೆಯ ನಂತರ ಶುದ್ಧ ನೀರು ಕುಡಿಯುವುದು ಅತ್ಯಂತ ಅವಶ್ಯಕ. ಇಲ್ಲವಾದರೆ ಆಹಾರ ಸೇವನೆಯು ವ್ಯರ್ಥವಾಗುತ್ತದೆ. ಅಲ್ಲದೇ ಅಜೀರ್ಣತೆಯಿಂದ ವಾಂತಿ, ಭೇದಿಯಂತಹ ಸಣ್ಣಪುಟ್ಟ ಆರೋಗ್ಯದ ತೊಂದರೆಗಳು ಶಾಲೆಯಲ್ಲಿ ಕಾಣಿಸಿಕೊಳ್ಳಬಹುದಾಗಿದೆ. ಕೆಲವು ಶಾಲೆಗಳಲ್ಲಿ ಯಾವುದೇ ಬಗೆಯ ಕುಡಿಯುವ ನೀರಿನ ವ್ಯವಸ್ಥೆ ಶಲೆಯ ಆವರಣದಲ್ಲಿ ಇರುವುದಿಲ್ಲ.

ಅಡುಗೆ ಸಹಾಯಕರು: ಕರ್ನಾಟಕದಲ್ಲಿ ಶಾಲೆಗಳಿಗೆ ಅಗತ್ಯವಾಗಿ ಬೇಕಾಗುವ ಮುಖ್ಯ ಅಡುಗೆಯವರು ಮತ್ತು ಅಡಿಗೆ ಸಹಾಯಕರುಗಳ ನೇಮಕಕ್ಕೆ ಮಾರ್ಗಸೂಚಿ ಇದೆ. ಕೆಲವು ಶಾಲೆಗಳಲ್ಲಿ ಮುಖ್ಯ ಅಡುಗೆಯವರಿಗೆ ಆಹಾರ ಸಾಮಗ್ರಿಗಳನ್ನು ದಾಸ್ತಾನು ತೆಗೆದುಕೊಳ್ಳುವ ಮತ್ತು ಇದಕ್ಕೆ ಸಂಬಂಧಿಸಿದ ಲಕ್ಕ ಪತ್ರಗಳ ದಾಖಲಾತಿಯು

ತಿಳಿದಿರುವುದಿಲ್ಲ. ಅಲ್ಲದೇ ಅವರಿಗೆ ಸ್ವಚ್ಛತೆಯಿಂದ ಆಹಾರ ತಯಾರಿಸುವುದರ ಬಗ್ಗೆ ಮತ್ತು ಅದರ ಅವಶ್ಯಕತೆ ಕುರಿತು ತಿಳಿಸಿ ಕೊಡಬೇಕಾಗಿದೆ. ಇದರಿಂದ ಬಿಸಿಯೂಟದ ಗುಣಮಟ್ಟವು ಕೂಡ ಹೆಚ್ಚುತ್ತದೆ.

ನಿರ್ವಹಣೆ ಮತ್ತು ಮೇಲು ಉಸ್ತುವಾರಿ : ಬಿಸಿಯೂಟ ಕಾರ್ಯಕ್ರಮದ ಮೇಲು ಉಸ್ತುವಾರಿಯಲ್ಲಿ ಅಲ್ಲೊಂದು ಇಲ್ಲೊಂದು ಉತಮವಾಗಿ ಕಂಡುಬಂದರೂ ಬಹಳಷ್ಟು ಮಟ್ಟಿಗೆ ಈ ಕಾರ್ಯಕ್ರಮದ ಮೇಲು ಉಸ್ತುವಾರಿಯು ಸಡಿಲವಾಗಿಯೇ ಇದೆ. ವಿವಿಧ ಇಲಾಖೆಗಳಲ್ಲಿ ಕೆಲವು ಅಧಿಕಾರಿಗಳು ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿದ್ದಾರೆ. ಈ ಕಾರ್ಯಕ್ರಮದ ಮಾರ್ಗಸೂಚಿಯಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು ಆಗಾಗ ತಪಾಸಣೆ ನಡೆಸಿ ಬಿಸಿಯೂಟದ ಗುಣಮಟ್ಟವನ್ನು ಉತ್ತಮ ಪಡಿಸಲು ಶ್ರಮಿಸಬೇಕಾಗಿದೆ.

4.3. ಅಕ್ಷರ ದಾಸೋಹ ಯೋಜನೆಯ ಕುರಿತು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಮುಖ್ಯೋಪಾಧ್ಯಾಯರಿಂದ ದೊರೆತ ಪ್ರಾಥಮಿಕ ಮಾಹಿತಿಗಳು

ಕೋಷ್ಟಕ-4.1 : ಧರ್ಮದ ಆಧಾರದಲ್ಲಿ ಮಾಹಿತಿದಾರರ ಹಂಚಿಕೆ

ಕ್ರ.ಸಂ	ಧರ್ಮ	ಸಂಖ್ಯೆ	ಶೇಕಡವಾರು
1	ಹಿಂದು	40	67.80
2	ಮುಸ್ಲಿಂ	1	1.70
3	ಕ್ರಿಶ್ಚಿಯನ್	18	30.50
4	ಇತರೆ	–	–
	ಒಟ್ಟು	59	100.00

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಈಮೇಲಿನ ದತ್ತಾಂಶದ ಆಧಾರದ ಮೇಲೆ ಸಂದರ್ಶನಕ್ಕೆ ಒಳಪಡಿಸಿದ ಒಟ್ಟು 59 ಮಾಹಿದಾರರಲ್ಲಿ ಸುಮಾರು 40 ರಷ್ಟು (ಶೇ. 67.80) ವಮಾಹಿತಿದಾರರು ಹಿಂದು ಧರ್ಮದವರಾಗಿದ್ದಾರೆ. ಸುಮಾರು 18 ರಷ್ಟು (ಶೇ. 30.50) ಮಾಹಿತಿದಾರರು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರು. ಕೇವಲ ಒಬ್ಬ (ಶೇ. 1.70) ಮಾಹಿತಿದಾರನು ಮುಸ್ಲಿಂ ಧರ್ಮದವರಾಗಿದ್ದಾರೆ.

ಕೋಷ್ಟಕ–4.2 : ಕುಟುಂಬದ ವಿವರ

ಕ್ರ.ಸಂ	ಸದಸ್ಯರ ಸಂಖ್ಯೆ	ಸಂಖ್ಯೆ	ಶೇಕಡವಾರು
1	4 ಕ್ಕಿಂತ ಕಡಿಮೆ	21	35.60
2	4 ರಿಂದ 6	31	52.55
3	6 ಕ್ಕಿಂತ ಮೇಲ್ಪಟ್ಟು	7	11.85
	ಒಟ್ಟು	59	100.00

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಅಧ್ಯಯನದಲ್ಲಿ ಕಂಡುಕೊಂಡಂತೆ ಒಟ್ಟು 59 ಮಾಹಿತಿದಾರರಲ್ಲಿಸುಮಾರು 21(ಶೇ. 35.60) ರಷ್ಟು ಮಾಹಿತಿದಾರರು ನಾಲ್ಕಕ್ಕಿಂತ ಕಡಿಮೆ ಸದಸ್ಯರಿರುವ ಕುಟುಂಬಕ್ಕೆ ಸೇರಿದವರು. 31 (ಶೇ. 52.55)ರಷ್ಟು ಮಾಹಿತಿದಾರರು ನಾಲ್ಕರಿಂದ ಆರು ಸದಸ್ಯರಿರುವ ಕುಟುಂಬಕ್ಕೆ ಸೇರಿದವರು. ಏಳು(ಶೇ. 11.85) ಮಂದಿ ಮಾಹಿತಿದಾರರು ಆರಕ್ಕಿಂತ ಹೆಚ್ಚು ಸದಸ್ಯರಿರುವ ಕುಟುಂಬಕ್ಕೆ ಸೇರಿದವರಾಗಿದ್ದಾರೆ.

ಕೋಷ್ಟಕ–4.3 : ಮಾಹಿತಿದಾರರ ಶಿಕ್ಷಣದ ವಿವರಗಳು

ಕ್ರ.ಸಂ	ಶಿಕ್ಷಣ	ಸಂಖ್ಯೆ	ಶೇಕಡವಾರು
1	ಪ್ರಾಥಮಿಕ	17	28.80
2	ಪ್ರೌಢಶಾಲೆ	21	35.60
3	ಪದವಿಪೂರ್ವ	8	13.55
4	ಪದವಿ	8	13.55
5	ಸ್ನಾತಕೋತ್ತರ	5	8.50
	ಒಟ್ಟು	59	100.00

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಈ ಮೇಲಿನ ದತ್ತಾಂಶದ ಪ್ರಕಾರ ಒಟ್ಟು 59 ಮಾಹಿತಿದಾರರಲ್ಲಿ 17 (ಶೇ. 28.80) ರಷ್ಟು ಮಾಹಿತಿದಾರರು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು, 21 (ಶೇ. 35.60) ರಷ್ಟು ಮಾಹಿತಿದಾರರು ಪ್ರೌಢಶಾಲೆಯ ವಿದ್ಯಾರ್ಥಿಗಳು. ಎಂಟು (ಶೇ. 13.55) ಮಾಹಿತಿದಾರರು ಶಿಕ್ಷಕರಾಗಿದ್ದು ಪದವಿಪೂರ್ವ ಶಿಕ್ಷಣದ ಜೊತೆ ಡಿ.ಎಡ್ ಮಾಡಿದವರಾಗಿದ್ದಾರೆ. ಎಂಟು (ಶೇ. 13.55) ರಷ್ಟು ಮಾಹಿತಿದಾರರು ಶಿಕ್ಷಕರಾಗಿದ್ದು ಪದವಿ ಮುಗಿಸಿದವರು. ಐದು (ಶೇ. 08.50) ಮಾಹಿತಿದಾರರು ಶಿಕ್ಷಕರಾಗಿದ್ದು ಸ್ನಾತಕೋತ್ತರ ಪದವಿ ಹೊಂದಿದವರು ಎಂದು ತಿಳಿದುಬಂದಿದೆ.

ಕೋಷ್ಟಕ-4.4 : ಕುಟುಂಬದ ಆದಾಯದ ಮೂಲ

ಕ್ರ.ಸಂ	ಆದಾಯದ ಮೂಲ	ಸಂಖ್ಯೆ	ಶೇಕಡವಾರು
1	ಕೃಷಿ	8	13.55
2	ಖಾಸಗಿ/ಸರ್ಕಾರಿ ಉದ್ಯೋಗ	18	30.50
3	ಉದ್ಯಮ / ವ್ಯಾಪಾರ	4	6.80
4	ಇತರೆ	29	49.15
	ಒಟ್ಟು	59	100.00

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಅಧ್ಯಯನದಲ್ಲಿ ಕಂಡುಕೊಂಡಂತೆ ಎಂಟು (ಶೇ. 13.55) ರಷ್ಟು ಮಾಹಿತಿದಾರರು ಆದಾಯದ ಮೂಲವಾಗಿ ಕೃಷಿಯನ್ನು ಅವಲಂಬಿಸಿದ್ದಾರೆ. 18 ಮಂದಿ ಮಾಹಿತಿದಾರರು (ಶೇ. 30.50) ಖಾಸಗಿ ಅಥವಾ ಸರ್ಕಾರಿ ಉದ್ಯೋಗವನ್ನು ಅವಲಂಬಿಸಿದ್ದಾರೆ. ನಾಲ್ಕು ಮಂದಿ ಮಾಹಿತಿದಾರರು (ಶೇ.6.80) ಉದ್ಯಮ/ವ್ಯಾಪಾರದಲ್ಲಿ ತೊಡಗಿದವರು. ಸುಮಾರು 29 (ಶೇ. 49.15) ರಷ್ಟು ಮಾಹಿತಿದಾರರು ಇತರ ಚಟುವಟಿಕೆಗಳಲ್ಲಿ ಆದಾಯ ಗಳಿಸುತ್ತಾರೆ ಅಂದರೆ ಹೆಚ್ಚಿನ ಮಕ್ಕಳ ಪೋಷಕರು ಕೂಲಿ ಕೆಲಸ ಮಾಡಿಕೊಂಡಿದ್ದಾರೆ ಇದರಿಂದ ಈ ಅಕ್ಷರ ದಾಸೋಹ ಯೋಜನೆಯು ಇಂಥವರಿಗೆ ತುಂಬಾ ಸಹಾಯಕವಾಗಿದೆ ಎಂಬುದು ತಿಳಿದು ಬಂದಿದೆ.

ಕೋಷ್ಟಕ-4.5 : ಕುಟುಂಬದ ವಾರ್ಷಿಕ ಆದಾಯ

ಕ್ರ.ಸಂ	ಆದಾಯ (ರೂ.)	ಸಂಖ್ಯೆ	ಶೇಕಡವಾರು
1	50000ಕ್ಕಿಂತ ಕಡಿಮೆ	30	50.85
2	500000ದಿಂದ 1 ಲಕ್ಷ	11	18.65
3	1 ಲಕ್ಷ ದಿಂದ 3 ಲಕ್ಷದವರಗೆ	07	11.85
4	3 ಲಕ್ಷಕ್ಕಿಂತ ಮೇಲ್ಪಟ್ಟು	11	18.65
	ಒಟ್ಟು	59	100.00

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಈ ಮೇಲಿನ ದತ್ತಾಂಶದ ಪ್ರಕಾರ ಸಮಾರು 30 (ಶೇ. 50.85) ರಷ್ಟು ಮಾಹಿತಿದಾರರು 50000 ಕ್ಕಿಂತ ಕಡಿಮೆ ಆದಾಯ ಹೊಂದಿದ್ದಾರೆ. 11 (ಶೇ. 18.65) ರಷ್ಟು ಮಾಹಿತಿದಾರರು 50000 ದಿಂದ ಒಂದು ಲಕ್ಷ ದವರೆಗೆ ಆದಾಯ ಹೊಂದಿದ್ದಾರೆ. ಏಳು (ಶೇ. 11.85) ಮಂದಿ ಮಾಹಿತಿದಾರರು (ಶಿಕ್ಷಕರು) ಸುಮಾರು ಒಂದು ಲಕ್ಷ ದಿಂದ ಮೂರು ಲಕ್ಷದವರೆಗೆ ಆದಾಯ ಹೊಂದಿದ್ದಾರೆ. 11 (ಶೇ. 18.65) ರಷ್ಟು ಮಾಹಿತಿದಾರರು (ಶಿಕ್ಷಕರು) ಮೂರು ಲಕ್ಷಕ್ಕಿಂತ ಮೇಲ್ಪಟ್ಟು ಆದಾಯ ಹೊಂದಿದ್ದಾರೆ. ಎಂಬುದನ್ನು ಈ ಮೇಲಿನ ಕೋಷ್ಟಕ ಸ್ಪಷ್ಟಪಡಿಸುತ್ತದೆ.

ಕೋಷ್ಟಕ-4.6 : ಅಕ್ಷರ ದಾಸೋಹ ಯೋಜನೆಯಿಂದ ಆದ ಪ್ರಯೋಜನಗಳ ಬಗ್ಗೆ ವಿದ್ಯಾರ್ಥಿಗಳುಮತ್ತು ಪೋಷಕರು, ಶಿಕ್ಷಕರು ಮತ್ತು ಮುಖ್ಯೋಪಾದ್ಯಾಯರಿಂದ ಸಿಕ್ಕಿದ ವಿವರಗಳು

ಕ್ರ.ಸಂ.	ಪ್ರಯೋಜನಗಳು	ಸಂಖ್ಯೆ	ಶೇಕಡವಾರು
1	ಬಡತನ ನಿವಾರಣೆ	13	6.31
2	ಆರೋಗ್ಯ ಸುಧಾರಣೆ	36	17.48
3	ಪೌಷ್ಟಿಕ್ಕತೆಯಲ್ಲಿ ವೃದ್ಧಿ	42	20.40
4	ಪಾಲ್ಗೊಳ್ಳುವಿಕೆಯಲ್ಲಿ ಹೆಚ್ಚಳ	26	12.62

5	ಯೋಚನಾಶಕ್ತಿಯಲ್ಲಿ ವೃದ್ಧಿ	24	11.65
6	ಮಧ್ಯದಲ್ಲೇ ಶಾಲೆ ಬಿಟ್ಟು ಹೊರ ಬರುವ ಸಮಸ್ಯೆ ನಿವಾರಣೆ	27	13.10
7	ವಿದ್ಯಾಭ್ಯಾಸದಲ್ಲಿ ಪ್ರಗತಿ	25	12.13
8	ಉದ್ಯೋಗ ಸೃಷ್ಟಿಸಿದೆ	13	6.31
	ಒಟ್ಟು	206	100.00

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಅಕ್ಷರ ದಾಸೋಹ ಯೋಜನೆಯಿಂದ ಆಗಿರುವ ಪ್ರಯೋಜನಗಳ ಬಗ್ಗೆ ಮಾಹಿತಿದಾರರು ಬೇರೆ ಬೇರೆ ರೀತಿಯಲ್ಲಿ ಮಾಹಿತಿ ನೀಡಿರುತ್ತಾರೆ. ಶೇಕಡ 06.31ರಷ್ಟು ಮಾಹಿತಿದಾರರ ಪ್ರಕಾರ ಈ ಯೋಜನೆಯಿಂದ ಬಡತನ ನಿವಾರಣೆಯಾಗಿದೆ. ಶೇ.17.48 ರಷ್ಟು ಮಾಹಿತಿದಾರರ ಪ್ರಕಾರ ಮಕ್ಕಳ ಆರೋಗ್ಯದಲ್ಲಿ ಸುಧಾರಣೆಯಾಗಿದೆ. ಶೇ.20.40 ರಷ್ಟು ಮಾಹಿತಿದಾರರ ಪ್ರಕಾರ ಮಕ್ಕಳ ಪೌಷ್ಠಿಕತೆಯಲ್ಲಿ ವೃದ್ಧಿಯಾಗಿದೆ. ಶೇ. 12.62 ರಷ್ಟು ಮಾಹಿತಿದಾರರ ಪ್ರಕಾರ ಮಕ್ಕಳ ಪಾಲ್ಗೊಳ್ಳುವಿಕೆಯಲ್ಲಿ ಹೆಚ್ಚಳವಾಗಿದೆ. ಸುಮಾರು 11.65ರಷ್ಟು ಮಾಹಿತಿದಾರರ ಪ್ರಕಾರ ಮಕ್ಕಳ ಯೋಚನಾಶಕ್ತಿಯಲ್ಲಿ ವೃದ್ಧಿಯಾಗಿದೆ. ಶೇ.13.10 ರಷ್ಟು ಮಾಹಿತಿದಾರರು ಮಕ್ಕಳು ಮಧ್ಯದಲ್ಲೇ ಶಾಲೆ ಬಿಟ್ಟು ಹೊರ ಬರುವ ಸಮಸ್ಯೆ ನಿವಾರಣೆಯಾಗಿದೆ ಎಂದಿದ್ದಾರೆ. ಶೇ. 12.13 ರಷ್ಟು ಮಾಹಿತಿದಾರರ ಪ್ರಕಾರ ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿಯಾಗಿದೆ ಹಾಗೂ ಶೇ. 6.31 ರಷ್ಟು ಮಾಹಿತಿದಾರರ ಪ್ರಕಾರ ಈ ಯೋಜನೆಯು ಮಹಿಳೆಯರಿಗೆ ಉದ್ಯೋಗ ಸೃಷ್ಟಿಸಿರುವ ಬಗ್ಗೆ ತಿಳಿಸಿದ್ದಾರೆ.

ಕೋಷ್ಟಕ-4.7 : ಅಕ್ಷರ ದಾಸೋಹ ಯೋಜನೆಯಲ್ಲಿರುವ ಅನನುಕೂಲತೆಗಳ ಬಗ್ಗೆ ವಿವರಗಳು

ಕ್ರ.ಸಂ.	**ಅನನುಕೂಲತೆಗಳು**	**ಸಂಖ್ಯೆ**	**ಶೇಕಡವಾರು**
1	ಶಿಕ್ಷಕರ ಕೆಲಸಕಾರ್ಯಗಳಿಗೆ ಅಡಚಣೆಯಾಗಿದೆ	15	28.85
2	ಊಟ ತಯಾರಿಕೆಯಲ್ಲಿ ಮೂಲಭೂತ ಸೌಲಭ್ಯದ ಕೊರತೆ	00	00
3	ಊಟ ವಿತರಣೆಯ ಸಮಸ್ಯೆ	00	00

4	ಸಾರಿಗೆ ಸಂಪರ್ಕದ ಸಮಸ್ಯೆ	7	13.46
5	ಆಹಾರ ಧಾನ್ಯಗಳ ಪೂರೈಕೆಯ ಸಮಸ್ಯೆ	29	55.76
6	ಅಪೌಷ್ಠಿಕತೆಯಿಂದ ಕೂಡಿದ ಆಹಾರ ಪದಾರ್ಥಗಳು	1	1.93
	ಒಟ್ಟು	52	100.00

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಅಧ್ಯಯನದಲ್ಲಿ ಕಂಡುಕೊಂಡಂತೆ ಒಟ್ಟು 59 ಮಾಹಿತಿದಾರರಲ್ಲಿ 52ಮಂದಿ ಮಾಹಿತಿದಾರರು ಈ ಯೋಜನೆಯ ಅನನುಕೂಲತೆಗಳ ಬಗ್ಗೆ ಮಾಹಿತಿ ನೀಡಿರುತ್ತಾರೆ. ಅವರಲ್ಲಿ 15 (ಶೇ. 28.85) ರಷ್ಟು ಮಾಹಿತಿದಾರರ ಪ್ರಕಾರ ಈಯೋಜನೆಯಿಂದ ಶಿಕ್ಷಕರ ಕೆಲಸಕಾರ್ಯಗಳಿಗೆ ಅಡಚಣೆಯಾಗಿದೆ. ಏಳು (ಶೆ.13.46)ಮಂದಿ ಮಾಹಿತಿದಾರರ ಪ್ರಕಾರ ಈ ಯೋಜನೆಯಲ್ಲಿ ಸಾರಿಗೆ ಸಂಪರ್ಕದ ಸಮಸ್ಯೆ ಇದೆ. ಸುಮಾರು 29 (ಶೇ. 55.76)ರಷ್ಟು ಮಾಹಿತಿದಾರರು ಆಹಾರ ಧಾನ್ಯಗಳ ಪೂರೈಕೆಯ ಸಮಸ್ಯೆಯ ಬಗ್ಗೆ ತಿಳಿಸಿದ್ದಾರೆ. ಕೇವಲ ಒಂದು (ಶೇ. 1.93) ಮಾಹಿತಿದರನ ಮೂಲಕ ಈ ಯೋಜನೆಯಲ್ಲಿ ಅಪೌಷ್ಠಿಕತೆಯಿಂದ ಕೂಡಿದ ಆಹಾರ ಪದಾರ್ಥಗಳನ್ನು ಒದಗಿಸಲಾಗುತ್ತದೆ ಎಂಬುದು ತಿಳಿದುಬರುತ್ತದೆ.

ಕೋಷ್ಟಕ-4.8 ಅಕ್ಷರ ದಾಸೋಹ ಯೋಜನೆಯ ಯಶಸ್ವಿಯ ಕುರಿತು ವಿವರ

ಕ್ರ.ಸಂ	ಉತ್ತರ	ಸಂಖ್ಯೆ	ಶೇಕಡವಾರು
1	ಹೌದು	59	100.00
2	ಇಲ್ಲ	–	–
	ಒಟ್ಟು	59	100.00

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಈ ಮೇಲಿನ ದತ್ತಾಂಶದ ಪ್ರಕಾರ ಮಾಹಿತಿ ನೀಡಿರುವ ಒಟ್ಟು 59 (ಶೇ.100)ರಷ್ಟು ಮಾಹಿತಿದಾರರು ಕೂಡಾ ಈ ಯೋಜನೆ ಯಶಸ್ವಿಯಾಗಿದೆ ಎಂಬುದನ್ನು ತಿಳಿಸಿದ್ದಾರೆ.

ಕೋಷ್ಟಕ-4.9 ಅಕ್ಷರ ದಾಸೋಹ ಯೋಜನೆ ಯಶಸ್ವಿಯಾಗಲು ಕಾರಣಗಳು

ಕ್ರ. ಸಂ.	ಕಾರಣಗಳು	ಸಂಖ್ಯೆ	ಶೇಕಡವಾರು
1	ಮಧ್ಯಾಹ್ನ ಬುತ್ತಿ ತರುವ ಸಮಸ್ಯೆ ಇಲ್ಲ	16	14.03
2	ಪೌಷ್ಟಿಕತೆ ಹೊಂದಿದ್ದಾರೆ.	18	15.80
3	ಮಕ್ಕಳ ಹಾಜರಾತಿ ಹೆಚ್ಚಿದೆ.	14	12.28
4	ಆರೋಗ್ಯ ಸ್ಥಿತಿ ಉತ್ತಮವಾಗಿದೆ.	14	12.28
5	ಮಕ್ಕಳು ಮಧ್ಯಾಹ್ನ ಊಟಕ್ಕಾಗಿ ಹೊರ ಹೋಗುವ ಸಮಸ್ಯೆ ಇಲ್ಲ	3	2.65
6	ಮನೆಯ ಊಟಕ್ಕಿಂತ ಶಾಲೆಯ ಊಟ ಒಳ್ಳೆಯದಾಗುತ್ತದೆ.	3	2.65
7	ಶುಚಿತ್ವದ ಬಗ್ಗೆ ತಿಳಿದುಕೊಳ್ಳತ್ತಾರೆ.	8	7.01
8	ಮಕ್ಕಳಲ್ಲಿ ತಾವೆಲ್ಲ ಒಂದೇ ಎಂಬ ಭಾವನೆ ಮೂಡುತ್ತದೆ	8	7.01
9	ಕುಟುಂಬದ ಆದಾಯದಲ್ಲಿ ಉಳಿತಾಯ	6	5.26
10	ತರಗತಿಯಲ್ಲಿ ಪಾಠದ ಸಮಯ ಹೊಟ್ಟೆ ಹಸಿವಿನ ಸಮಸ್ಯೆ ಇಲ್ಲ	4	3.50
11	ಬಡತನ ನಿವಾರಣೆ	7	6.14
12	ಅನಕ್ಷರತೆ ನಿವಾರಣೆ	4	3.50
13	ಮಕ್ಕಳು ಪಾಠದ ಕಡೆಗೆ ಗಮನ ಕೊಡುತ್ತಾರೆ	1	0.87
14	ದೇಶದಲ್ಲಿ ಬಾಲಕಾರ್ಮಿಕರ ಪ್ರಮಾಣ ಕಡಿಮೆಯಾಗಿದೆ.	1	0.87
15	ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ ಇದೆ	2	1.75
16	ಶಾಲೆ ಬಿಟ್ಟು ಹೊರಬರುವ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ	2	1.75
17	ಉದ್ಯೋಗ ಸೃಷ್ಟಿಸಿದೆ	3	2.65
	ಒಟ್ಟು	114	100.00

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಅಧ್ಯಯನದಲ್ಲಿ ಕಂಡುಕೊಂಡಂತೆ ಅಕ್ಷರ ದಾಸೋಹ ಯೋಜನೆ ಯಶಸ್ವಿಯಾಗುವುದಕ್ಕೆ ಹಲವಾರು ಕಾರಣಗಳಿವೆ. ಶೇ.14.03 ರಷ್ಟು ಮಾಹಿತಿದಾರರ ಪ್ರಕಾರ ಅಕ್ಷರ ದಾಸೋಹ ಯೋಜನೆಯಿಂದಾಗಿ ಮಧ್ಯಾಹ್ನ ಬುತ್ತಿ ತರುವ ಸಮಸ್ಯೆ ಇಲ್ಲವಾಗಿದೆ. ಶೇ.15.80ರಷ್ಟು ಮಾಹಿತಿದಾರರ ಪ್ರಕಾರ ಮಕ್ಕಳು ಪೌಷ್ಟಿಕತೆಯನ್ನು ಹೊಂದಿದ್ದಾರೆ. ಶೇ.12.28 ಮಾಹಿತಿದಾರರ ಪ್ರಕಾರ ಮಕ್ಕಳ ಹಾಜರಾತಿ ಹೆಚ್ಚಿದೆ ಹಾಗೂ ಆರೋಗ್ಯ ಸ್ಥಿತಿ ಉತ್ತಮವಾಗಿದೆ. ಶೇ.2.65 ರಷ್ಟು ಮಾಹಿತಿದಾರರ ಪ್ರಕಾರ ಮಕ್ಕಳು ಮಧ್ಯಾಹ್ನದ ಹೊತ್ತು ಊಟಕ್ಕಾಗಿ ಹೊರಹೋಗುವ ಸಮಸ್ಯೆ ಇಲ್ಲವಾಗಿದೆ ಮತ್ತು ಮಕ್ಕಳಿಗೆ ಮನೆಯ ಊಟಕ್ಕಿಂತ ಶಾಲೆಯ ಊಟ ಒಳ್ಳೆಯದಾಗುತ್ತದೆ ಎಂಬುದು ತಿಳಿದುಬಂದಿದೆ. ಶೇ. 7.01 ರಷ್ಟು

ಮಾಹಿತಿದಾರರ ಪ್ರಕಾರ ಮಕ್ಕಳಲ್ಲಿ ತಾವೆಲ್ಲ ಒಂದೇ ಎಂಬ ಭಾವನೆ ಮೂಡುತ್ತದೆ ಮತ್ತು ಮಕ್ಕಳು ಶುಚಿತ್ವದ ಬಗ್ಗೆ ತಿಳಿದುಕೊಳ್ಳುತ್ತಾರೆ. ಶೇ.5.26 ರಷ್ಟು ಮಾಹಿತಿದಾರರ ಪ್ರಕಾರ ಕುಟುಂಬದ ಆದಾಯದಲ್ಲಿ ಉಳಿತಾಯವಾಗಿದೆ. ಶೇ. 3.50ರಷ್ಟು ಮಾಹಿತಿದಾರರ ಪ್ರಕಾರ ತರಗತಿಯಲ್ಲಿ ಪಾಠದ ಸಮಯದಲ್ಲಿ ಮಕ್ಕಳ ಹೊಟ್ಟೆ ಹಸಿವಿನ ಸಮಸ್ಯೆ ಮತ್ತು ಅನಕ್ಷರತೆಯ ಸಮಸ್ಯೆ ನಿವಾರಣೆಯಾಗಿದೆ. ಹಾಗೂ ಶೇ. 6.14ರಷ್ಟು ಮಾಹಿತಿದಾರರ ಪ್ರಕಾರ ಈ ಯೋಜನೆಯಿಂದ ಬಡತನ ನಿವಾರಣೆಯಾಗಿದೆ ಎಂಬುದನ್ನು ತಿಳಿಯಬಹುದಾಗಿದೆ. ಶೇ. 0.87 ರಷ್ಟು ಮಾಹಿತಿದಾರರ ಪ್ರಕಾರ ಮಕ್ಕಳು ಪಾಠದ ಕಡೆಗೆ ಗಮನ ಕೊಡುತ್ತಾರೆ ಮಾತ್ರವಲ್ಲದೆ ಇದರಿಂದ ದೇಶದಲ್ಲಿ ಬಾಲಕಾರ್ಮಿಕರ ಪ್ರಮಾಣ ಕಡಿಮೆಯಾಗುತ್ತಿದೆ. ಶೇ.1.75 ರಷ್ಟು ಮಾಹಿತಿದಾರರ ಪ್ರಕಾರ ಶಾಲೆ ಬಿಟ್ಟು ಹೊರ ಬರುವ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ ಮತ್ತು ಅವರ ವಿದ್ಯಾಭ್ಯಾಸದಲ್ಲಿ ಪ್ರಗತಿ ಇದೆ. ಶೇ. 2.65 ರಷ್ಟು ಮಾಹಿತಿದಾರರ ಪ್ರಕಾರ ಈ ಯೋಜನೆಯು ಹಿಂದುಳಿದ ವರ್ಗದ ಮಹಿಳೆಯರಿಗೆ ಉದ್ಯೋಗವನ್ನು ಸೃಷ್ಟಿಸಿದೆ.

ಕೋಷ್ಟಕ–4.10 ಅಕ್ಷರ ದಾಸೋಹ ಯೋಜನೆಯನ್ನು ಮುಂದುವರಿಸುವ ಬಗ್ಗೆ ಮಾಹಿತಿದಾರರ ಅಭಿಪ್ರಾಯ

ಕ್ರ.ಸಂ	ಉತ್ತರ	ಸಂಖ್ಯೆ	ಶೇಕಡವಾರು
1	ಹೌದು	59	100.00
2	ಇಲ್ಲ	–	–
	ಒಟ್ಟು	59	100.00

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಈ ಮೇಲಿನ ದತ್ತಾಂಶದ ಪ್ರಕಾರ ಸಂದರ್ಶನಕ್ಕೆ ಸಹಕರಿಸಿದ ಒಟ್ಟು 59 (ಶೇ.100) ರಷ್ಟು ಮಾಹಿತಿದಾರರು ಈ ಯೋಜನೆಯನ್ನು ಮುಂದುವರಿಸುವಂತೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವುದನ್ನು ಕಂಡುಕೊಳ್ಳಬಹುದು.

ಕೋಷ್ಟಕ–4.11 ಅಕ್ಷರ ದಾಸೋಹ ಯೋಜನೆಯನ್ನು ಇನ್ನಷ್ಟು ಯಶಸ್ವಿಗೊಳಿಸಲು ಮಾಹಿತಿದಾರರು ನೀಡಿರುವ ಸಲಹೆಗಳು

ಕ್ರ. ಸಂ.	ಸಲಹೆಗಳು	ಸಂಖ್ಯೆ	ಶೇಕಡವಾರು
1	ಅಡುಗೆ ತಯಾರಿಸುವವರ ವೇತನ ಹೆಚ್ಚಾಗಬೇಕು	26	15.05
2	ಬಿಸಿಯೂಟದಲ್ಲಿ ವೈವಿಧ್ಯತೆ ತರಬೇಕು ಮತ್ತು ಪೌಷ್ಟಿಕತೆಯ ಆಹಾರ ಒದಗಿಸಬೇಕು	16	9.25
3	ಸರಳೀಕೃತ ಲೆಕ್ಕಾಚಾರ	05	2.90
4	ವಾರಕ್ಕೊಮ್ಮೆಯಾದರೂ ಮೊಟ್ಟೆ ಅಥವಾ ಹಣ್ಣು ನೀಡಬೇಕು	12	6.95

5	ತರಕಾರಿಗೆ ಹೆಚ್ಚಿನ ಅನುದಾನ ನೀಡಬೇಕು	36	20.80
6	ಉತ್ತಮ ಗುಣಮಟ್ಟದ ಅಕ್ಕಿ ಅಥವಾ ಇತರ ಧಾನ್ಯಗಳನ್ನು ಒದಗಿಸಬೇಕು	40	23.12
7	ಆಹಾರ ತಯಾರಿಸಲು ಬೇಕಾಗುವ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕು	12	6.93
8	ಆಹಾರ ಸಾಮಗ್ರಿಗಳನ್ನು ಸರಿಯಾದ ಸಮಯಕ್ಕೆ ಪೂರೈಕೆ ಮಾಡಬೇಕು	18	10.40
9	ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿದ್ದರೆ ಹೆಚ್ಚು ಧಾನ್ಯಗಳನ್ನು ಪೂರೈಕೆ ಮಾಡಬೇಕು	04	2.31
10	ಆಹಾರ ತಯಾರಿಸುವ ಕಟ್ಟಡವನ್ನು ಅಭಿವೃದ್ಧಿ ಪಡಿಸುವುದು	02	1.15
11	ಈ ಯೋಜನೆಯನ್ನು ಪದವಿ ಪೂರ್ವದವರೆಗೂ ವಿಸ್ತರಿಸಬೇಕು	01	0.57
12	ಶನಿವಾರದ ಊಟದ ಬದಲು ತಿಂಡಿಯನ್ನು ನೀಡಿದರೆ ಉತ್ತಮ. ಉದಾ: ಸಜ್ಜಿಗೆ, ಬೇಯಿಸಿದ ಹೆಸರುಕಾಳುಗಳು	01	0.57
	ಒಟ್ಟು	173	100.00

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಅಧ್ಯಯನದಲ್ಲಿ ಕಂಡುಕೊಂಡಂತೆ 15.05ರಷ್ಟು ಮಾಹಿತಿದಾರರು ಅಡುಗೆ ಸಿಬ್ಬಂದಿಯವರ ವೇತನ ಹೆಚ್ಚಿಸಬೇಕು ಮತ್ತು ದಿನಕ್ಕೆ ಕನಿಷ್ಟ ಕೂಲಿಯನ್ನಾದರೂ ನೀಡಬೇಕು ಎನ್ನುವ ಸಲಹೆಯನ್ನು ನೀಡಿದ್ದಾರೆ. ಶೇ. 9.25 ರಷ್ಟು ಮಾಹಿತಿದಾರರು ಬಿಸಿಯೂಟದಲ್ಲಿ ವೈವಿಧ್ಯತೆ ತರಬೇಕು ಮತ್ತು ಪೌಷ್ಠಿಕ ಆಹಾರ ಒದಗಿಸಬೇಕು ಎಂದು ಸಲಹೆ ನೀಡಿದ್ದಾರೆ. ಶೇ. 2.90ರಷ್ಟು ಮಾಹಿತಿದಾರರು ಸರಳೀಕೃತ ಲೆಕ್ಕಾಚಾರ ಇರಬೇಕು ಎಂದು ಸಲಹೆ ನೀಡಿದ್ದಾರೆ. ಶೇ.6.95ರಷ್ಟು ಮಾಹಿತಿದಾರರು ವಾರಕ್ಕೊಮ್ಮೆಯಾದರೂ ಮೊಟ್ಟೆ ಅಥವಾ ಹಣ್ಣು ನೀಡಬೇಕು ಎಂದು ಸಲಹೆ ನೀಡಿದ್ದಾರೆ. ಶೇ.20.80ರಷ್ಟು ಮಾಹಿತಿದಾರರು ತರಕಾರಿ ಪಲ್ಯಕ್ಕೆ ಹೆಚ್ಚಿನ ಅನುದಾನ ನೀಡುವಂತೆ ಸಲಹೆ ನೀಡಿರುತ್ತಾರೆ. ಶೇ. 23.12ರಷ್ಟು ಮಾಹಿತಿದಾರರು ಉತ್ತಮ ಗುಣಮಟ್ಟದ ಅಕ್ಕಿ ಮತ್ತು ಇತರ ಧಾನ್ಯಗಳನ್ನು ಒದಗಿಸುವಂತೆ ಸಲಹೆ ನೀಡಿರುತ್ತಾರೆ. ಶೇ.6.93ರಷ್ಟು ಮಾಹಿತಿದಾರರು ಆಹಾರ ತಯಾರಿಸಲು ಬೇಕಾಗುವ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕು ಎಂದು ಸಲಹೆ ನೀಡಿರುತ್ತಾರೆ. ಶೇ. 10.40 ರಷ್ಟು ಮಾಹಿತಿದಾರರು ಆಹಾರ ಸಾಮಗ್ರಿಗಳನ್ನು ಸರಿಯಾದ ಸಮಯಕ್ಕೆ ಪೂರೈಕೆ ಮಾಡುವಂತೆ ಸಲಹೆ ನೀಎಇದ್ದಾರೆ.

ಬಿಸಿಯೂಟ ಮಾಡಿದ ದಿನಗಳಲ್ಲಿ ಮಕ್ಕಳು ಅಸ್ವಸ್ಥರಾದ ಘಟನೆಗಳು ಎಲ್ಲಿಯೂ ಕಂಡುಬಂದಿಲ್ಲ ಎನ್ನುವುದು ಎಲ್ಲಾ ಮಾಹಿತಿದಾರರ ಅಭಿಪ್ರಾಯವಾಗಿದೆ. ಅಲ್ಲದೇ ಶೈಕ್ಷಣಿಕ ಪ್ರಗತಿಗಾಗಿ ಹಮ್ಮಿಕೊಂಡ ಯೋಜನೆಗಳಿಂದ ಮಕ್ಕಳಿಗೆ ಒಳಿತಾಗಿದೆ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ.

ಅಧ್ಯಾಯ–5

ಸಾರಾಂಶ ಮತ್ತು ಕೊನೆಮಾತು

ಅಧ್ಯಾಯ-5

ಸಾರಾಂಶ ಮತ್ತು ಕೊನೆಮಾತು

5.1 ಸಾರಾಂಶ

ಪ್ರಸ್ತುತ ಅಧ್ಯಯನವು ಸರಕಾರದ ಪ್ರೋತ್ಸಾಹಕ ಕಾರ್ಯಕ್ರಮವಾದ ಅಕ್ಷರ ದಾಸೋಹ ಯೋಜನೆಯ ವಿಶ್ಲೇಷಣೆಯನ್ನು ಒಳಗೊಂಡಿದೆ. ಈ ಸಂಪ್ರಬಂಧದ ಮೊದಲ ಅಧ್ಯಾಯವು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದ ಪ್ರಗತಿಗೆ ಸರಕಾರವು ಮಾಡಿರುವ ವಿವಿಧ ಯೋಜನೆಗಳ ವಿಶ್ಲೇಷಣೆ ಇದೆ. ಮುಂದಿನ ಭಾಗದಲ್ಲಿ ಅಧ್ಯಯನದ ಸಮಸ್ಯೆಗಳು, ಉದ್ದೇಶಗಳು, ಊಹೆಗಳು, ಮಿತಿಗಳು ಮತ್ತು ಅಧ್ಯಯನದ ವಿಧಾನಗಳನ್ನು ಒಳಗೊಂಡಿದೆ. ಎರಡನೆಯ ಅಧ್ಯಾಯವು (ಅಕ್ಷರ ದಾಸೋಹ ಯೋಜನೆಗಿಂತ ಮೊದಲು ಜಾರಿಯಲ್ಲಿದ್ದ ಆಹಾರ ಧಾನ್ಯ ವಿತರಣೆಯ ಸಾಧಕ-ಬಾಧಕಗಳನ್ನು ಒಳಗೊಂಡಿದೆ. ಮೂರನೆಯ ಅಧ್ಯಾಯವು ಈ ಯೋಜನೆಯ ಪರಿಣಾಮ, ಶಾಲಾ ದಾಖಲಾತಿ, ಮಕ್ಕಳ ಪೌಷ್ಠಿಕತೆ ಕುರಿತ ವಿಶ್ಲೇಷಣೆಯನ್ನು ಒಳಗೊಂಡಿದೆ. ನಾಲ್ಕನೆಯ ಅಧ್ಯಾಯವು ಅಕ್ಷರ ದಾಸೋಹ ಯೋಜನೆಗೆ ಸಂಬಂಧಿಸಿದ ಅನುಕೂಲತೆಗಳು, ಅನನುಕೂಲತೆಗಳು, ಸಮಸ್ಯೆಗಳು ಮತ್ತು ಪರಿಹಾರಗಳನ್ನು ಒಳಗೊಂಡಿದೆ ಹಾಗೂ ಐದನೆಯ ಅಧ್ಯಾಯವು ಒಟ್ಟು ಸಂಶೋಧನೆಯ ಸಾರವನ್ನು ಹೇಳುತ್ತದೆ.

5.2 ಅಧ್ಯಯನದ ಶೋಧ

ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಪ್ರಗತಿಗಾಗಿ ಸರಕಾರ ಹಮ್ಮಿಕೊಂಡ ವವಿಧ ಪ್ರೋತ್ಸಾಹಕ ಯೋಜನೆಗಳಲ್ಲಿ ಒಂದಾದ ಅಕ್ಷರ ದಾಸೋಹ ಯೋಜನೆಯ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಆಯ್ದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವ್ಯಾಪ್ತಿಯಲ್ಲಿ ಕೈಗೊಂಡ ಈ ಅಧ್ಯಯನದಲ್ಲಿ ಮಂಗಳೂರು ತಾಲ್ಲೂಕಿನ ಒಟ್ಟು ನಾಲ್ಕು ಶಾಲೆಗಳಲ್ಲಿ ಸುಮಾರು 59 ಜನರನ್ನು ಸಂದರ್ಶಿಸಿ ಪ್ರಶ್ನಾವಳಿಗಳ ಮೂಲಕ ಮಾಹಿತಿ ಪಡೆದು ಅಧ್ಯಯನದ ಉದ್ದೇಶಗಳಿಗನುಗುಣವಾಗಿ ವಿಶ್ಲೇಷಣೆ ಮಾಡಲಾಯಿತು.

5.3 ಸಲಹೆಗಳು

ಅಧ್ಯಯನದಲ್ಲಿ ಕಂಡುಕೊಂಡಂತೆ ಅಕ್ಷರ ದಾಸೋಹ ಯೋಜನೆಯು ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಬಡತನ ನಿವಾರಣೆ, ಶಿಕ್ಷಣ ಕ್ಷೇತ್ರದ ಪ್ರಗತಿ, ಬಾಲ ಕಾರ್ಮಿಕರ ಪ್ರಮಾಣ ಕಡಿಮೆಗೊಳಿಸಿ ಮಕ್ಕಳು ಶಲೆಯಲ್ಲಿ

ಉಳಿದುಕೊಳ್ಳುವಂತೆ ಮಾಡಲು ಸರಕಾರ ಮಾಡಿರುವ ಅದ್ಭುತ ಸಾಧನೆಯಾಗಿದೆ. ಅಕ್ಷರ ದಾಸೋಹ ಯೋಜನೆಯ ಅನುಷ್ಠಾನದಲ್ಲಿ ಸಣ್ಣ ಪುಟ್ಟ ತೊಡಕುಗಳಿದ್ದರೂ ಸಂದರ್ಶನಕ್ಕೆ ಸಹಕರಿಸಿದ ಯಾರೂ ಕೂಡಾ ಈ ಯೋಜನೆಯನ್ನು ನಿಲ್ಲಿಸುವಂತೆ ಸಲಹೆ ನೀಡಿಲ್ಲ. ಮಾಹಿದಾರರ ಪ್ರಕಾರ ಈ ಯೋಜನೆಯ ಅನನುಕೂಲತೆಗಳಿಗಿಂತ ಪ್ರಯೋಜನಗಳು ಅಧಿಕವಾಗಿವೆ.

ಈ ಯೋಜನೆಯನ್ನು ಇನ್ನಷ್ಟು ಯಶಸ್ವಿಗೊಳಿಸಲು ಕೆಲವೊಂದು ಸಲಹೆಗಳನ್ನು ಮಾಹಿತಿದಾರರಿಂದ ಪಡೆಯಲಾಗಿದೆ.

ಮೊದಲನೆಯದಾಗಿ ಉತ್ತಮ ಗುಣಮಟ್ಟದ ಅಕ್ಕಿ ಮತ್ತು ಧಾನ್ಯಗಳನ್ನು ಒದಗಿಸಬೇಕು.

ಎರಡನೆಯದಾಗಿ ಅಡುಗೆ ಸಿಬ್ಬಂದಿಯವರ ವೇತನವನ್ನು ಸರಕಾರವು ಹೆಚ್ಚಿಸಬೇಕು. ಅವರಿಗೆ ದಿನಕ್ಕೆ ಕನಿಷ್ಠ ಕೂಲಿಯ ಲೆಕ್ಕದಲ್ಲಾದರೂ ವೇತನ ನೀಡಬೇಕು.

ಮೂರನೆಯದಾಗಿ ಆಹಾರ ಸಾಮಗ್ರಿಗಳನ್ನು ಶಾಲೆಗಳಿಗೆ ಸರಿಯಾದ ಸಮಯದಲ್ಲಿ ಪೂರೈಕೆ ಮಾಡಬೇಕು. ಕೆಲವೊಂದು ಶಾಲೆಗಳಿಗೆ ಸಂಜೆ ಶಾಲೆ ಬಿಟ್ಟ ನಂತರ ತುಂಬಾ ತಡವಾಗಿ ಪೂರೈಕೆ ಮಾಡಲಾಗುತ್ತಿದೆ. ಇಂತಹ ಸಮಸ್ಯೆಗಳನ್ನು ಆದಷ್ಟು ನಿವಾರಿಸಬೇಕು.

ನಾಲ್ಕನೆಯದಾಗಿ ಈ ಯೋಜನೆಯನ್ನು ಸರಕಾರವು ಸಾಧ್ಯವಾದಲ್ಲಿ ಪದವಿಪೂರ್ವದವರೆಗೂ ವಿಸ್ತರಿಸಬೇಕು.

ಐದನೆಯದಾಗಿ ವಾರಕ್ಕೊಮ್ಮೆಯಾದರೂ ಮೊಟ್ಟೆ ಅಥವಾ ಹಣ್ಣು ನೀಡಬೇಕು.

ಆರನೆಯದಾಗಿ ಬಿಸಿಯೂಟದಲ್ಲಿ ವೈವಿಧ್ಯತೆ ತರಬೇಕು ಮತ್ತು ಪೌಷ್ಠಿಕತೆಯ ಆಹಾರ ಒದಗಿಸಬೇಕು.

ಏಳನೆಯದಾಗಿ ಆಹಾರ ಧಾನ್ಯಗಳನ್ನು ಪೂರೈಕೆ ಮಾಡುವಾಗ ತೂತಿರದ ಗೋಣಿಚೀಲಗಳನ್ನು ಬಳಸುವುದು.

ಎಂಟನೆಯದಾಗಿ ತರಕಾರಿ ಪಲ್ಯಕ್ಕಾಗಿ ನೀಡುವ ಅನುದಾನವನ್ನು ಹೆಚ್ಚಿಸುವುದು.

ಈ ಎಲ್ಲಾ ಸಲಹೆಗಳ ಆಧಾರದ ಮೇಲೆ ಅಕ್ಷರ ದಾಸೋಹ ಯೋಜನೆಯನ್ನು ಇನ್ನಷ್ಟು ಯಶಸ್ವಿಗೊಳಿಸಲು ಸರಕಾರವು ಪ್ರಯತ್ನಿಸಬೇಕು.

ಕೊನೆ ಮಾತು

ಸಮಯದ ಅಭಾವದಿಂದ ಅಧ್ಯಯನದಲ್ಲಿ ಮಂಗಳೂರು ತಾಲ್ಲೂಕಿನ ಆಯ್ದ ಕೇವಲ ನಾಲ್ಕು ಶಾಲೆಗಳ ವಿದ್ಯಾರ್ಥಿಗಳು ಮತ್ತು ಪೋಷಕರು, ಶಿಕ್ಷಕರು, ಮತ್ತು ಮುಖ್ಯೋಪಾಧ್ಯಾಯರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಆದರೂ ಈ ಅಧ್ಯಯನದಲ್ಲಿ ಸಾಕಷ್ಟು ಮಾಹಿತಿಗಳನ್ನು ತಿಳಿದುಕೊಳ್ಳಲಾಗಿದೆ. ಸರಕಾರ ಮಾಡಿರುವ ಈ ಅಕ್ಷರ ದಾಸೋಹ ಯೋಜನೆಯು ಕಡು ಬಡತನವಿರುವ ಕುಟುಂಬದ ಮಕ್ಕಳಿಗೆ ದೇವರು ಕೊಟ್ಟ ವರವಾಗಿದೆ. ಕೆಲವೊಂದು ಮಕ್ಕಳ ಅಭಿಪ್ರಾಯದಂತೆ ಮನೆಯ ಊಟಕ್ಕಿಂತ ಶಾಲೆಯ ಊಟ ತುಂಬಾ ಒಳ್ಳೆಯದಾಗಿರುತ್ತದೆ. ಹಾಗೂ ಶಿಕ್ಷಕರ ಪ್ರಕಾರ ಮನೆಯಲ್ಲಿ ಬಡತನವಿರುವ ಮಕ್ಕಳು ಶಾಲಾದಿನಗಳಲ್ಲಿ ದೈಹಿಕವಾಗಿ ಪುಷ್ಟಿಯುತವಾಗಿರುತ್ತಾರೆ. ರಜಾ ಮುಗಿದು ಬರುವಾಗ ತುಂಬಾ ಬಲಹೀನರಾಗಿರುತ್ತರೆ ಎಂಬುದು ಅಧ್ಯಯನದಿಂದ ತಿಳಿದುಬಂದಿರುವ ವಿಷವಾಗಿದ್ದು ಇಂತಹ ಮಕ್ಕಳ ಏಳಿಗೆಗಾಗಿ ಸರಕಾರವುಇಂತಹ ಪ್ರೋತ್ಸಾಹಕ ಯೋಜನೆಗಳನ್ನು ಇನ್ನಷ್ಟು ಯಶಸ್ವಿಗೊಳಿಸುವಂತೆ ಪ್ರಯತ್ನಿಸಬೇಕಾಗುತ್ತದೆ. ಇಂತಹ ಪ್ರೋತ್ಸಾಹಕ ಕಾರ್ಯಕ್ರಮಗಳಿಂದ ನಮ್ಮ ದೇಶದಲ್ಲಿ ಶಿಕ್ಷಣದ ಕ್ಷೇತ್ರದಲ್ಲಿ ಗಣನೀಯ ಪ್ರಗತಿ ಸಾಧ್ಯವಾಗಬಹುದು.

ಅನುಬಂಧ – 1

"ಅಕ್ಷರ ದಾಸೋಹ ಯೋಜನೆ : ಮಂಗಳೂರು ತಾಲ್ಲೂಕಿನ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವ್ಯಾಪ್ತಿಯಲ್ಲಿ ಒಂದು ಅಧ್ಯಯನ"
ಸಂದರ್ಶನ ಅನುಸೂಚಿ
ಪ್ರಶ್ನಾವಳಿ

ದಿನಾಂಕ :

ದೂರವಾಣಿ/ಮೊಬೈಲ್ ನಂಬರ್:

1. ಮಾಹಿತಿದಾರರ ವಿವರ

ಹೆತ್ತವರು/ ಪೋಷಕರು

ಶಿಕ್ಷಕರು/ಮುಖ್ಯೋಪಾಧ್ಯಾಯರು

2. ಹೆಸರು :
3. ಶಾಲೆಯ ಹೆಸರು ಮತ್ತು ವಿಳಾಸ :
4. ವಯಸ್ಸು :
5. ಲಿಂಗ : ಪುರುಷ / ಸ್ತ್ರೀ
6. ವಿವಾಹಿತ/ಹಿತೆ: ಹೌದು / ಅಲ್ಲ
7. ಧರ್ಮ : ಹಿಂದು/ಮುಸ್ಲಿಂ/ಕ್ರಿಶ್ಚಿಯನ್/ಇತರ
8. ಕುಟುಂಬದ ಸದಸ್ಯರ ಸಂಖ್ಯೆ :
   1. 4 ಕ್ಕಿ<ತ ಕದಿಮೆ
   2. 4 ರಿಂದ 6
   3. 6 ಕ್ಕಿಂತ ಮೇಲ್ಪಟ್ಟು
9. ಶಿಕ್ಷಣ :
   1. ಪ್ರಾಥಮಿಕ
   2. ಪ್ರೌಢಶಾಲೆ
   3. ಪದಪಿ ಪೂರ್ವ
   4. ಪದಪಿ
   5. ಸ್ನಾತಕೋತ್ತರ
   6. ಅನಕ್ಷರಸ್ಥರು
10. ಕುಟುಂಬದ ಆದಾಯದ ಪ್ರಮುಖ ಮೂಲ:
    1. ಕೃಷಿ
    2. ಖಾಸಗಿ /ಸರಕಾರಿ ಉದ್ಯೋಗ
    3. ಉದ್ಯಮ / ವ್ಯಾಪಾರ
    4. ಇತರೆ
11. ಕುಟುಂಬದ ವಾರ್ಷಿಕ ಆದಾಯ :
    1. 50000 ಕ್ಕಿಂತ ಕಡಿಮೆ
    2. 50000 ದಿಂದ 1 ಲಕ್ಷ
    3. 1 ಲಕ್ಷ ದಿಂದ 3 ಲಕ್ಷದವರೆಗೆ
    4. 3 ಲಕ್ಷ ಕ್ಕಿಂತ ಮೇಲ್ಪಟ್ಟು

12. ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಹಮ್ಮಿಕೊಂಡ ವಿವಿಧ ಶೈಕ್ಷಣಿಕ ಯೋಜನೆಗಳಿಂದ ಮಕ್ಕಳಿಗೆ ಒಳಿತಾಗಿವೆಯೇ ? ಹೌದು ______ ಇಲ್ಲ ______

13. ಹೌದಾದರೆ ಕಾರಣ ತಿಳಿಸಿ
    1. ಮಕ್ಕಳ ಹಾಜರಾತಿಯ ಹೆಚ್ಚಳ
    2. ಮಕ್ಕಳ ದಾಖಲಾತಿಯ ಹೆಚ್ಚಳ

14. ಇಲ್ಲವಾದರೆ ಕಾರಣ ತಿಳಿಸಿ.

15. ಸರಕಾರದ ಅಕ್ಷರ ದಾಸೋಹ ಯೋಜನೆಯಿಂದ ಯಾವ ಪ್ರಯೋಜನಗಳಾಗಿವೆ?
    1. ಬಡತನ ನಿವಾರಣೆ
    2. ಆರೋಗ್ಯ ಸುಧಾರಣೆ
    3. ಪೌಷ್ಠಿಕತೆಯಲ್ಲಿ ವೃದ್ಧಿ
    4. ಪಾಲ್ಗೊಳ್ಳುವಿಕೆಯಲ್ಲಿ ಹೆಚ್ಚಳ
    5. ಯೋಚನಾಶಕ್ತಿಯಲ್ಲಿ ವೃದ್ಧಿ
    6. ಮಧ್ಯದಲ್ಲೇ ಶಾಲೆ ಬಿಟ್ಟು ಹೊರ ಬರುವ ಸಮಸ್ಯೆ ನಿವಾರಣೆ
    7. ವಿದ್ಯಾಭ್ಯಾಸದಲ್ಲಿ ಪ್ರಗತಿ
    8. ಉದ್ಯೋಗ ಸೃಷ್ಟಿಸಿದೆ

16. ನಿಮ್ಮ ಅಭಿಪ್ರಾಯದಲ್ಲಿ ಸರಕಾರದ ಅಕ್ಷರ ದಾಸೋಹ ಯೋಜನೆಯಲ್ಲಿ ಇರುವ ಕೆಡುಕುಗಳು/ಅನನುಕೂಲತೆಗಳು ಯಾವುವು?
    1. ಶಿಕ್ಷಕರ ಕೆಲಸಕಾರ್ಯಗಳಿಗೆ ಅಡಚಣೆಯಾಗಿದೆ
    2. ಊಟ ತಯಾರಿಕೆಯಲ್ಲಿ ಮೂಲಭೂತ ಸೌಲಭ್ಯದ ಕೊರತೆ
    3. ಊಟ ವಿತರಣೆಯ ಸಮಸ್ಯೆ
    4. ಸಾರಿಗೆ ಸಂಪರ್ಕದ ಸಮಸ್ಯೆ
    5. ಆಹಾರ ಧಾನ್ಯಗಳ ಪೂರೈಕೆಯ ಸಮಸ್ಯೆ
    6. ಅಪೌಷ್ಠಿಕತೆಯಂದ ಕೂಡಿದ ಆಹಾರ ಪದಾರ್ಥಗಳು

17. ಬಿಸಿಯೂಟ ಮಾಡಿದ ದಿನಗಳಲ್ಲಿ ಮಕ್ಕಳು ಅಸ್ವಸ್ಥರಾದ ಘಟನೆಗಳು ಇವೆಯೇ? ಹೌದು ______ ಇಲ್ಲ ______

18. ಹೌದಾದರೆ ವಿವರಣೆ ನೀಡಿ.

19. ಅಕ್ಷರ ದಾಸೋಹ ಯೋಜನೆ ಯಶಸ್ವಿ ಯಾಗಿದೆ ಎಂದು ನೀವು ಹೇಳ್ತೀರ? ಹೌದು ________ ಇಲ್ಲ ______

20. ಹೌದಾದರೆ ವಿವರಣೆ ನೀಡಿ.

21. ಇಲ್ಲವಾದರೆ ವಿವರಣೆ ನೀಡಿ.

22. ನಿಮ್ಮ ಅಭಿಪ್ರಾಯದಲ್ಲಿ ಅಕ್ಷರ ದಾಸೋಹ ಯೋಜನೆಯನ್ನು ಸರಕಾರ ಮುಂದುವರಿಸಬೇಕೆಂದು ಹೇಳ್ತೀರ?

ಹೌದು ________ ಇಲ್ಲ ________

23. ಅಕ್ಷರ ದಾಸೋಹ ಯೋಜನೆಯನ್ನು ಇನ್ನಷ್ಟು ಯಶಸ್ವಿಗೊಳಿಸಲು ನಿಮ್ಮ ಸಲಹೆಗಳನ್ನು ನೀಡಿ.

ಅನುಬಂಧ –2

ಭಾವಚಿತ್ರಗಳು

ಪೊಂಪೈ ಜೂನಿಯರ್ ಕಾಲೇಜಿನ ಅಕ್ಷರ ದಾಸೋಹ ಕಟ್ಟಡ










ಆಹಾರ ಧಾನ್ಯಗಳನ್ನು ತುಂಬಿಸಿದ ಗೋಣಿಚೀಲ ತೂತಾಗಿ ಧಾನ್ಯಗಳ ಸೋರಿಕೆ ಯಾಗಿರುವುದು





ಪರಾಮರ್ಶನ ಪಟ್ಟಿ

ಗ್ರಂಥಗಳು

ಎಚ್. ಡಿ. ಪ್ರಶಾಂತ್, (2004). ಶಾಲಾ ಬಿಸಿಯೂಟ ಅಧ್ಯಯನ ವರದಿ, ಹಂಪಿ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.

ಎಚ್. ಡಿ. ಪ್ರಶಾಂತ್, ,(2007), ಶಾಲಾ ಶಿಕ್ಷಣ, ಬೆಂಗಳೂರು: ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ಮತ್ತು ಕರ್ನಾಟಕ ಸೆಟಿಯರ್ ಇಲಾಖೆ ಕರ್ನಾಟಕ ಸರ್ಕಾರ.

ಆರ್. ಓಬಳೇಶಘಟ್ಟಿ, (1998.), ಉದಯೋನ್ಮುಖಿ ಭಾರತದಲ್ಲಿ ಶಿಕ್ಷಣ, ಬೆಂಗಳೂರು: ಕೇಂಬ್ರಿಡ್ಜ್ ಪಬ್ಲಿಷಿಂಗ್ ಕಂಪೆನಿ.

ಆರ್. ಓಬಳೇಶಘಟ್ಟಿ, (2009), ಕರ್ನಾಟಕ ಶಿಕ್ಷಣದಲ್ಲಿ ಹೊಸ ಹೆಜ್ಜೆಗಳು, ಗದಗ: ವಿದ್ಯಾನಿಧಿ ಪ್ರಕಾಶನ.

ಎ. ಶಶಿಕಲಾ ಮತ್ತು ಇತರರು, (2011), ಆಧುನಿಕ ಶಿಕ್ಷಣದ ಒಲವುಗಳು, ಮೈಸೂರು: ವಿಜಯಲಕ್ಷ್ಮೀ ಪ್ರಕಾಶನ – ಕುವೆಂಪುನಗರ.

ಎಂ. ಚಂದ್ರಪೂಜಾರಿ, (2008), ಸಂಶೋಧನ ಪ್ರಸ್ತಾವ, ಹಂಪಿ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.

ಬಿ. ಪ್ರಭಾಕರ ಶಿಶಿಲ, (2013), ಅಭಿವೃದ್ಧಿ ಅರ್ಥಶಾಸ್ತ್ರ, ಮಂಗಳೂರು: ಮಂಗಳ ಪ್ರಕಾಶನ.

ಪುರುಷೋತ್ತಮ ಕೆ. ವಿ., (2012), ಪರಿಸರ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಗೃಹತ್ಯಾಜ್ಯ ನಿರ್ವಹಣೆಯ ಸಮಸ್ಯೆಗಳು: ಮಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್. ಮಹಾ ಪ್ರಬಂಧ, ಹಂಪಿ ಕನ್ನಡ ವಿಶ್ವವಿದ್ಯಾಲಯ

ನಿಯತಕಾಲಿಕೆಗಳು

ರೀತಿಕಾ ಖೇರಾ (2006), "ಮಿಡ್ಡೇಮೀಲ್ ಸ್ಕೀಮ್", ಇಕಾನಾಮಕ್ ಆಂಡ್ ಪೊಲಿಟಿಕಲ್ ವೀಕ್ಲಿ,

ಸಿದ್ದೇಶ್ವರ್ ಶುಕ್ಲ (2014), "ಮಿಡ್ಡೇಮೀಲ್ ಸ್ಕೀಮ್", ಇಕಾನಾಮಕ್ ಆಂಡ್ ಪೊಲಿಟಿಕಲ್ ವೀಕ್ಲಿ,

ಕಾಂಪಿಟೇಶನ್ ಸಕ್ಸಸ್ ರಿವಿವ್ (2014) ಪೇ ಆಫ್ ಮಿಡ್ಡೇಮೀಲ್ ವರ್ಕರ್ಸ್ ಡಬಲ್ಡ್ ಆಂಡ್ ಪೈ ಲೈಟ್ಸ್. 18

ಅಂತರ್ಜಾಲ ತಾಣಗಳು

http://www.indg.in/india/.../caaccdcb0cbeca5caecbfc95-cb6cbfc95ccdcb7ca3

http://kannada.oneindia.in >ಕನ್ನಡ

http://indiareflects.com/kannada/?p=29744

http://www.livemint.com/.../india82175-literacy-rate-rises_to-74-census.html

http://www.en.wikipedia.org/wiki/Indian_states_ranking_by_literacy_rate.

http://www.interlinepublishing.com/user-content-detail-view.php?cid=1710.